ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 06, 2020

ಸಂಪುಟ : 47 ಸಂಚಿಕೆ : 187 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಕೊರೊನಾ ಹರಡುವಿಕೆಯಲ್ಲಿ ದಾವಣಗೆರೆ ಮುಂಚೂಣಿ

**ಸೆರೋ ಸಮೀಕ್ಷೆಯಂತೆ ಜಿಲ್ಲೆಯಲ್ಲಿ 40.6% ಜನರಿಗೆ ಸೋಂಕು, ರಾಜ್ಯದಲ್ಲಿ ಎರಡನೇ ಸ್ಥಾನ**

ದಾವಣಗೆರೆ, ನ. 5 – ರಾಜ್ಯ ಸರ್ಕಾರ ನಿನ್ನೆಯಷ್ಟೇ ಪ್ರಕಟಿಸಿದ ಕೊರೊನಾ ಸೆರೋ ಸಮೀಕ್ಷೆಯಲ್ಲಿ ದಾವಣಗೆರೆ ಜಿಲ್ಲೆಯು ರಾಜ್ಯ ದಲ್ಲೇ ಎರಡನೇ ಸ್ಥಾನ ಪಡೆದುಕೊಂಡಿದೆ.

ಇಡೀ ರಾಜ್ಯದಲ್ಲಿ ಕೋವಿಡ್ - 19 ಹರಡಿರುವ ಪ್ರಮಾಣ ಶೇ.27.3ರಷ್ಟಿದ್ದರೆ, ಜಿಲ್ಲೆಯಲ್ಲಿ ಅದು ಶೇ.40.6ರಷ್ಟಿದೆ ಎಂದು ಸಮೀಕ್ಷೆ ತಿಳಿಸಿದೆ.

ಪಕ್ಕದ ಬಳ್ಳಾರಿ ಜಿಲ್ಲೆ ಮಾತ್ರ ದಾವಣಗೆರೆಗಿಂತ ಮೊದಲಿದ್ದು, ಅಲ್ಲಿ ಕೊರೊನಾ ಹರಡುವಿಕೆ ಶೇ.43.1ರಷ್ಟಿದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ಈ ಎರಡೂ ಜಿಲ್ಲೆಗಳಲ್ಲಿ ಮಾತ್ರ ಕೊರೊನಾ ಹರಡುವಿಕೆ ಶೇ.40ಕ್ಕಿಂತ ಹೆಚ್ಚಾಗಿದೆ.



ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿ ಕಡಿಮೆ ಶೇ.16.3ರಷ್ಟು ಕೊರೊನಾ ಹರಡುವಿಕೆ ಇದೆ ಎಂದು ಸಮೀಕ್ಷೆ ತಿಳಿಸಿದೆ.

ರಾಜ್ಯದ ಒಟ್ಟು ಜನಸಂಖ್ಯೆ 7.07 ಕೋಟಿ ಆಗಿದ್ದು, ಈ ಪೈಕಿ ಶೇ.27.3ರಷ್ಟು ಜನಸಂಖ್ಯೆ ಸಕ್ರಿಯ ಸೋಂಕು ಹೊಂದಿದೆ ಅಥವಾ ಹಿಂದೆಯೇ ಸೋಂಕಿಗೆ ಒಳಗಾಗಿದೆ. ಹೀಗಾಗಿ ಸೋಂಕಿತರ ಸಂಖ್ಯೆ ರಾಜ್ಯದಲ್ಲಿ 1.93 ಕೋಟಿ ಎಂದು ತಿಳಿಸಲಾಗಿದೆ.

ಪ್ರತ್ಯೇಕವಾಗಿ ಜಿಲ್ಲೆಗಳಲ್ಲಿ ಎಷ್ಟು ಕೊರೊನಾ ಸೋಂಕಿದೆ ಎಂಬ ಅಂದಾಜನ್ನು ಸಮೀಕ್ಷೆಯಲ್ಲಿ ಪ್ರಕಟಿಸಿಲ್ಲ. ಆದರೆ, ರಾಜ್ಯದ ಕೊರೊನಾ ಸೋಂಕನ್ನು ಅಂದಾಜಿಸಿದ ಮಾದರಿಯಲ್ಲೇ ಲೆಕ್ಕ (3ನೇ ಪುಟಕ್ಕೆ)

### ಪತ್ತೆಗಿಂತ 40 ಪಟ್ಟು ಹೆಚ್ಚಿನ ಸೋಂಕಿತರು!

ರಾಜ್ಯದಲ್ಲಿ ಖಚಿತವಾದ ಆರ್.ಟಿ.ಪಿ.ಸಿ. ಆರ್. ಪರೀಕ್ಷೆಗೂ 40 ಪಟ್ಟು ಹೆಚ್ಚಿನ ಸೋಂಕಿತ ರಿದ್ದು, ಇವರನ್ನು ಪತ್ತೆ ಹಚ್ಚಲಾಗಿಲ್ಲ ಎಂದು ಸೆರೋ ಸಮೀಕ್ಷೆ ಹೇಳಿದೆ.

ಈ ರೀತಿ ಪತ್ತೆ ಹಚ್ಚಲಾಗದ ಪ್ರಕರಣ 40 ಪಟ್ಟಿಗೂ ಹೆಚ್ಚು ಇರುವ ಜಿಲ್ಲೆಗಳಲ್ಲಿ ದಾವಣಗೆರೆಯೂ ಸೇರಿದೆ. ಹೀಗಾಗಿ ಜಿಲ್ಲೆಯಲ್ಲಿ ಕೊರೊನಾ ಶಿಷ್ಟಾಚಾರಗಳಾದ ಮಾಸ್ಕ್ ಧರಿಸುವುದು, ಅಂತರ ಕಾಯ್ದು ಕೊಳ್ಳುವುದು ಹಾಗೂ ಆಗಾಗ ಕೈ ತೊಳೆದು ಕೊಳ್ಳುವಂತಹ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜೊತೆಗೆ ಜನನಿಬಿಡ ಪ್ರದೇಶ ಗಳಿಂದ ದೂರವಿರಬೇಕು ಎಂದು ಸಮೀಕ್ಷೆ ತಿಳಿಸಿದೆ. ದಾವಣಗೆರೆಯಷ್ಟೇ ಅಲ್ಲದೇ ವಿಜ ಯಪುರ, ಬೆಳಗಾವಿ, ಚಿತ್ರದುರ್ಗ, ತುಮಕೂರು, ರಾಯಚೂರು, ರಾಮನಗರ, ಹಾವೇರಿ, ಚಾಮರಾಜ ನಗರ, ಬೀದರ್, (2ನೇ ಪುಟಕ್ಕೆ)

# ಮಾಜಿ ಸಚಿವ ವಿನಯ್ ಕುಲಕರ್ಣಿ ಬಂಧನ

## ಜಿ.ಪಂ. ಮಾಜಿ ಸದಸ್ಯ ಯೋಗೇಶ್ ಗೌಡ ಹತ್ಯೆ ಪ್ರಕರಣ ಹಿನ್ನೆಲೆ: ಸಿಬಿಐನಿಂದ ವಿಚಾರಣೆ



ವಿನಯ್ ಕುಲಕರ್ಣಿ

ಬೆಂಗಳೂರು, ನ. 5 – 2016ರಲ್ಲಿ ಹತರಾಗಿದ್ದ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಯೋಗೇಶ್ ಗೌಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಚಿವ ವಿನಯ್ ಕುಲಕರ್ಣಿ ಅವರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

ಧಾರವಾಡದ ಹೊರ ವಲಯ ದಲ್ಲಿರುವ ಕುಲಕರ್ಣಿ ನಿವಾಸದಿಂದ ವಶಕ್ಕೆ ತೆಗೆದುಕೊಂಡಿರುವ ಸಿಬಿಐ, ದಿನವಿಡೀ ವಿಚಾರಣೆ ನಡೆಸಿದೆ. ನಂತರ ಸಂಜೆ ಅವರನ್ನು ಬಂಧಿಸಿದೆ.

ಪ್ರಶ್ನೆಗಳನ್ನು ಕೇಳಿದ ಸಂದರ್ಭದಲ್ಲಿ ಕುಲಕರ್ಣಿ ನುಣುಚಿಕೊಳ್ಳುವ ಉತ್ತರ ನೀಡಿದ್ದಾರೆ. ಹೀಗಾಗಿ, ಹತ್ಯೆಯ ಹಿಂದಿನ ಸಂಚು ಬಯಲಿಗೆ ಎಳೆಯಲು ಕಸ್ಟಡಿ ವಿಚಾರಣೆಯ ಅಗತ್ಯವಿದೆ ಸಿಬಿಐ ಮೂಲಗಳು ಹೇಳಿವೆ.

ಜೂನ್ 15, 2016ರಲ್ಲಿ ಗುರುತಿಸಲಾಗದ ವ್ಯಕ್ತಿಗಳು ಯೋಗೇಶ್ ಗೌಡ ಅವರನ್ನು ಅವರ ಜಿಮ್‌ನಲ್ಲೇ ಹತ್ಯೆಗೈದಿದ್ದರು. ಆಸ್ತಿ ವಿವಾದದ ಹಿನ್ನೆಲೆಯಲ್ಲಿ ಹತ್ಯೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದರು.

ಆದರೆ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಕರಣವನ್ನು ಸಿಬಿಐಗೆ ವಹಿಸಲಾಗಿತ್ತು. ನಂತರದಲ್ಲಿ ಸಾಕ್ಷಿ ನಾಶದ ಆರೋಪದ ಮೇಲೆ (3ನೇ ಪುಟಕ್ಕೆ)


### ಬಿಜೆಪಿಯ ಕುತಂತ್ರ



ಬೆಂಗಳೂರು, ನ. 5 – ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ವಿರುದ್ಧ ಬಿಜೆಪಿ ರಾಜಕೀಯ ಕುತಂತ್ರ ಮಾಡುತ್ತಿದೆ. ಸಿಬಿಐ ಅಧಿಕಾರಿಗಳು ಒತ್ತಡಕ್ಕೆ ಮಣಿ ಯದೇ, ಕಾನೂನು ಚೌಕಟ್ಟಿನಲ್ಲಿ ವಿಚಾ ರಣೆ ನಡೆಸಲಿ. ನಮ್ಮ ಪಕ್ಷದ ಮುಖಂಡ ರು, ಕಾರ್ಯಕರ್ತರು ಯಾವುದೇ ತಪ್ಪು ಮಾಡಿಲ್ಲ, ಅವರ ಬೆನ್ನಿಗೆ ನಾವು ನಿಲ್ಲುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ತಿಳಿಸಿದ್ದಾರೆ.

ನಾನು ಈಗಾಗಲೇ ನಮ್ಮ ಮುಖಂಡರಾದ ವಿನಯ್ ಕುಲಕರ್ಣಿ ಅವರ ಜತೆ ಈ ವಿಚಾರವಾಗಿ ಮಾತ ನಾಡಿದ್ದೇನೆ. ಅವರ ಪ್ರಕರಣ ವನ್ನು ನಮ್ಮ ರಾಜ್ಯ ಪೊಲೀಸರು ತನಿಖೆ ಮಾಡಿ ವರದಿ ಸಲ್ಲಿಸಿದ್ದಾರೆ. ಆದರೆ, ಆ ಭಾಗದ ಬಿಜೆಪಿ ನಾಯಕರು ಅವರನ್ನು ರಾಜಕೀಯವಾಗಿ (3ನೇ ಪುಟಕ್ಕೆ)

### ವಿನಯ್ ಬೆಂಬಲಕ್ಕಿದೆ ಪಂಚಮಸಾಲಿ ಸಮಾಜ



ಬೆಂಗಳೂರು, ನ. 5 -ಲಿಂಗಾಯತ ಸಮಾಜದ ಮುಖಂಡ ವಿನಯ್ ಕುಲಕರ್ಣಿ ಅವರನ್ನು ಸಿಬಿಐ ಬಂಧಿಸಿರುವುದು ಖಂಡನೀಯ. ಉತ್ತಮ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದ ವ್ಯಕ್ತಿಯನ್ನು ಬೆಳಗಿನ ಜಾವ ಏಕಾಏಕಿ ಬಂಧಿಸಿರುವುದು ಸರಿಯಲ್ಲ ಎಂದು ಪಂಚಮಸಾಲಿ ಮಠದ ಜಯಮೃತ್ಯುಂಜಯ ಶ್ರೀಗಳು ಹೇಳಿದ್ದಾರೆ.

ವಿನಯ್ ಕುಲಕರ್ಣಿ ಅವರನ್ನು ಬಂಧಿಸುವ ಮುನ್ನ ಕನಿಷ್ಠ ನೋಟಿಸ್ ನೀಡಬಹುದಿತ್ತು. ಚುನಾವಣೆ ಸಂದರ್ಭದಲ್ಲಿ ಕೇವಲ ನಮ್ಮ ಜನಾಂಗವನ್ನು ಬಳಕೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ರಾಜಕೀಯ ನಾಯಕರು ಬೆಳೆಸಿಕೊಂಡಿದ್ದಾರೆ ಎಂದು ಪಂಚಮಸಾಲಿ ಶ್ರೀಗಳು ಆರೋಪಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಇಡೀ ಸಮುದಾಯ, ಪಂಚಾಮ ಸಾಲಿ ಮಠ ವಿನಯ್ ಕುಲಕರ್ಣಿ ಜೊತೆಗಿದೆ ಎಂದಿದ್ದಾರೆ.

### ರಾಜಕೀಯ ದುರುದ್ಧೇಶವಿದ್ದರೆ ವಿರೋಧಿಸುತ್ತೇವೆ



ದಾವಣಗೆರೆ, ನ.5- ವಿನಯ ಕುಲಕರ್ಣಿ ಬಂಧನದ ಹಿಂದೆ ರಾಜಕೀಯ ದುರುದ್ದೇಶವಿದ್ದರೆ ಖಂಡಿಸುವುದಾಗಿ ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದ್ದಾರೆ. ನಿಜವಾಗಿಯೂ ಸಿಬಿಐ ವಿಚಾರಣೆ ನಡೆಸುವುದು ಅನಿವಾರ್ಯವಾಗಿದ್ದರೆ ನಾವು ಪ್ರಶ್ನಿಸುವುದಿಲ್ಲ. ಆದರೆ ಷಡ್ಯಂತ್ರದಿಂದ ಅವರ ಹೆಸರು ಹಾಳು ಮಾಡುವ ಉದ್ದೇಶವಿದ್ದರೆ ವಿರೋಧಿಸುತ್ತೇವೆ ಎಂದು ಶ್ರೀಗಳು ಹೇಳಿದ್ದಾರೆ.

# ದುಡಿಮೆ ಇರಲಿ, ಪಾರ್ಕಿಂಗ್ ಜವಾಬ್ದಾರಿ ಬೇಡ !

## ಪಾರ್ಕಿಂಗ್‌ಗೆ ಜಾಗ ಬಿಡದ ವಾಣಿಜ್ಯ ಸಂಕೀರ್ಣಗಳ ತೆರವು: ಜಿಲ್ಲಾಧಿಕಾರಿ ಎಚ್ಚರಿಕೆ

ದಾವಣಗೆರೆ, ನ. 5 - ದುಡಿಮೆ ಸ್ವಂತಕ್ಕೆ, ಸರ್ಕಾರಿ ಜಾಗ ಪಾರ್ಕಿಂಗ್‌ಗೆ. ವ್ಯಾಪಾರ ನಮಗೆ, ಅಂಗಡಿ ಮುಂದಿನ ಸಂಚಾರ ನಿಯಂತ್ರಣದ ಜವಾಬ್ದಾರಿ ಪೊಲೀಸರಿಗೆ ಎಂಬ ಪರಿಸ್ಥಿತಿ ನಗರದ ಕೆಲ ಪ್ರಮುಖ ವ್ಯಾಪಾರಿಗಳದ್ದಾಗಿದೆ ಎಂದು ಜಿಲ್ಲಾ ರಸ್ತೆ ಸುರಕ್ಷತಾ ಸಭೆಯಲ್ಲಿ ಅಸಮಾಧಾನ ವ್ಯಕ್ತವಾಗಿದೆ.



ಅತಿ ಹೆಚ್ಚಿನ ಗ್ರಾಹಕರನ್ನು ಹೊಂದಿರುವ ಕೆಲ ಅಂಗಡಿ ಹಾಗೂ ಹೋಟೆಲ್‌ಗಳು ವಾಹನ ನಿಲುಗಡೆ ಮತ್ತು ಸಂಚಾರ ನಿಯಂತ್ರಣಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದು ಸಂಚಾರಿ ಪೊಲೀಸರ ಮೇಲಿನ ಹೊರೆ ಹೆಚ್ಚಿಸುತ್ತಿದೆ. ಇದರ ಜೊತೆಗೆ ಪಿ.ಜೆ. ಬಡಾವಣೆಯಲ್ಲಿ ಮನೆಗಳನ್ನೇ ಕ್ಲಿನಿಕ್‌ಗಳಾಗಿ ಪರಿವರ್ತಿಸಿ ರಸ್ತೆ ಸಂಚಾರಕ್ಕೆ ಅಡ್ಡಿಪಡಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಹಾಗೂ ಟ್ಯಾಕ್ಸಿ ಡ್ರೈವರ್ ಸಂಘದ ಕೆ.ಡಿ. ದೀಕ್ಷಿತ್ ಆಕ್ಷೇಪಿಸಿದರು.

ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ವಾಣಿಜ್ಯ ಸಂಕೀರ್ಣಗಳನ್ನು ಕಟ್ಟಿಕೊಂಡವರು ಪಾರ್ಕಿಂಗ್‌ಗೆ ಜಾಗ ಬಿಡದೇ ಹೋದರೆ ವಾರದಲ್ಲೇ ಕಟ್ಟಡ ಕೆಡವುವ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಪಾರ್ಕಿಂಗ್ ಜಾಗ ಒತ್ತುವರಿ ಮಾಡಿಕೊಂಡವರು ತಕ್ಷಣವೇ ತೆರವುಗೊಳಿಸಬೇಕು. ಈ ಕ್ರಮಕ್ಕೆ ಪ್ರತ್ಯೇಕ ನೋಟಿಸ್ ನೀಡುವ ಅಗತ್ಯವೂ ಇಲ್ಲ. ಮಾಧ್ಯಮದ ಮೂಲಕ ನೀಡಿರುವ ಹೇಳಿಕೆಯನ್ನೇ ನೋಟಿಸ್ ಎಂದು ಪರಿಗಣಿಸಿ

**ದಾರಿ ಯಾವುದಯ್ಯಾ ಡಿ.ಸಿ. ಮನೆಗೆ !?**

**ಬೈಪಾಸ್ ಮೂಲಕ ದಾವಣಗೆರೆಗೆ ಬರುವವರಿಗೆ ಶಾಮನೂರು ಬಳಿ ಸೂಚನಾ ಫಲಕ ಅಳವಡಿಸಲು ಮೂರು ಬಾರಿ ಸೂಚನೆ ನೀಡಿದರೂ ಹೆದ್ದಾರಿ ಪ್ರಾಧಿಕಾರ ಗಮನ ಹರಿಸಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತರಾಟೆಗೆ ತೆಗೆದುಕೊಂಡರು.**

**ದೂರದ ಊರುಗಳಿಂದ ಬರುವ ನಮ್ಮ ಸಂಬಂಧಿಕರಿಗೆ ಡಿ.ಸಿ. ಮನೆಗೆ ಹೋಗುವ ದಾರಿ ಯಾವುದೆಂದು ಗೊತ್ತಾಗದೇ ಶಾಮನೂರಿಗೆಲ್ಲಾ ಹೋಗುತ್ತಿದ್ದಾರೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.**

ಮಾಲೀಕರು ಕ್ರಮಕ್ಕೆ ಮುಂದಾಗಬೇಕು ಎಂದವರು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಸಂಚಾರಕ್ಕೆ ಸಮಸ್ಯೆಯಾಗುವಂತೆ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವವರಿಗೆ ಈಗಾಗಲೇ ನೋಟಿಸ್ ಕಳಿಸಲಾಗಿದೆ. ಹೆಚ್ಚಿನ ಗ್ರಾಹಕರನ್ನು ಹೊಂದಿರುವವರು ಸ್ವಂತವಾಗಿ ಗಾರ್ಡ್‌ಗಳನ್ನು ನೇಮಿಸಿಕೊಳ್ಳಲು ಹಾಗೂ ಸಿಸಿಟಿವಿ ಅಳವಡಿಸಿಕೊಳ್ಳಲು ತಿಳಿಸಲಾಗಿದೆ ಎಂದರು.

**ವಾರದ ಅಭಿಯಾನ :** ಟ್ರ್ಯಾಕ್ಟರ್‌ಗಳು ಸೇರಿದಂತೆ ವಾಹನಗಳು, ಅಪಘಾತ ತಡೆಯಲು ರಿಫ್ಲೆಕ್ಟರ್ ಅಂಟಿಸಿಕೊಳ್ಳುವ, ಇಂಡಿಕೇಟರ್ ಇಲ್ಲವೇ ಲೈಟ್‌ಗಳನ್ನು ಹಾಕಿಕೊಳ್ಳಬೇಕು ಎಂದು ಸಭೆಗೆ ಆರ್.ಟಿ.ಒ. ಶ್ರೀಧರ್ ಮಲ್ನಾಡ್ ತಿಳಿಸಿದರು. ಟ್ರ್ಯಾಕ್ಟರ್‌ಗಳು ಕೆಲವೊಮ್ಮೆ ಡಬಲ್ ಟ್ರಾಲಿಯಲ್ಲಿ ಹೋಗುತ್ತವೆ. ಆ ಬಗ್ಗೆ ರಾತ್ರಿ ವೇಳೆ ಗೊತ್ತಾಗುವುದೇ ಇಲ್ಲ ಎಂದು ಹೇಳಿದ ಎಸ್ಪಿ ಹನುಮಂತರಾಯ, ಎಂ -ಸ್ಯಾಂಡ್ ವಾಹನಗಳು ಅಸ್ತವ್ಯಸ್ತವಾಗಿ ಚಲಿಸುವುದೂ ಸೇರಿದಂತೆ ಹಲವಾರು ಸಮಸ್ಯೆಗಳ ವಿರುದ್ಧ ವಾರದ ಅಭಿಯಾನ ಹಮ್ಮಿಕೊಳ್ಳಬೇಕೆಂದು ಸೂಚಿಸಿದರು.

ನಗರದ ವಿದ್ಯಾರ್ಥಿ ಭವನದಿಂದ ಹದಡಿ ರಸ್ತೆಯವರೆಗೆ ಬೀದಿ ದೀಪಗಳಿಲ್ಲದೇ (2ನೇ ಪುಟಕ್ಕೆ)

### ಐ.ಟಿ. : ಕೆಲಸಕ್ಕೆ ಸರಳೀಕೃತ ಮಾರ್ಗಸೂಚಿ

ನವದೆಹಲಿ, ನ. 5 – ಬಿ.ಪಿ.ಒ. ಹಾಗೂ ಐ.ಟಿ. ಕಂಪನಿಗಳ ಮೇಲಿನ ನಿಯಮ ಪಾಲನೆ ಹೊರೆ ಕಡಿಮೆ ಮಾಡಲು ಹಾಗೂ ಮನೆಯಿಂದಲೇ ಕೆಲಸ ಮಾಡಲು ಸೌಲಭ್ಯ ಕಲ್ಪಿಸಲು ಕೇಂದ್ರ ಸರ್ಕಾರ ಸರಳೀಕೃತ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ಮನೆ ಯಿಂದ ಕೆಲಸ ಮಾಡುವ ನಿಯಮ ಗಳಲ್ಲಿ ಸರಳತೆ (3ನೇ ಪುಟಕ್ಕೆ)

### ವಿ.ವಿ. ಆರಂಭಕ್ಕೆ ಯುಜಿಸಿ ಮಾರ್ಗಸೂಚಿ

ನವದೆಹಲಿ, ನ. 5 – ದೇಶಾ ದ್ಯಂತ ಇರುವ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳ ಪುನರಾರಂಭದ ಮಾರ್ಗಸೂಚಿಗಳಿಗೆ ಯು.ಜಿ.ಸಿ. ಅಧಿಸೂಚನೆ ಹೊರಡಿಸಿದೆ.

ಕೇಂದ್ರ ವಿಶ್ವವಿದ್ಯಾನಿಲಯಗಳು ಹಾಗೂ ಕೇಂದ್ರದಿಂದ ಅನುದಾನ ಪಡೆ ಯುವ ಇತರೆ ಸಂಸ್ಥೆಗಳ ಕ್ಯಾಂಪಸ್ ತೆರೆಯುವ ಕುರಿತು ಆಯಾ ಕುಲ ಪತಿಗಳು ಹಾಗೂ ಸಂಸ್ಥೆಗಳ ಮುಖ್ಯಸ್ಥರು ನಿರ್ಧಾರ ತೆಗೆದುಕೊಳ್ಳಬೇಕಿದೆ.

ರಾಜ್ಯ ವಿಶ್ವವಿದ್ಯಾನಿಲಯಗಳ ಕುರಿತು ಆಯಾ (3ನೇ ಪುಟಕ್ಕೆ)

## ಇನ್ನೆರಡು ದಿನದಲ್ಲಿ ಕಾರ್ಯಪಡೆ ವರದಿ



**ಈಗಾಗಲೇ ಪ್ರಾಥಮಿಕ ಹಂತದ ಶಿಫಾರಸ್ಸುಗಳನ್ನು ಸಲ್ಲಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ ಕಾರ್ಯಪಡೆ**

ಬೆಂಗಳೂರು, ನ. 5 - ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗಾಗಿ ರಚನೆ ಮಾಡ ಲಾಗಿರುವ ಕಾರ್ಯಪಡೆಯು ತನ್ನ ಅಂತಿಮ ಶಿಫಾರಸ್ಸುಗಳ ಕರಡನ್ನು ಇನ್ನೆರಡು ದಿನಗಳಲ್ಲಿ ಸರ್ಕಾರಕ್ಕೆ ಸಲ್ಲಿಸಲಿದೆ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

'ರಾಷ್ಟ್ರೀಯ ಶಿಕ್ಷಣ ನೀತಿ-2020; ವಿಶ್ವ ಗುರುವಾಗುವತ್ತ ಭಾರತ' ಎಂಬ ವಿಷಯದ ಬಗ್ಗೆ ಬೆಳಗಾವಿಯ ವಿಶ್ವೇಶ್ವ ರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಗುರುವಾರ ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಬೆಂಗಳೂರಿನಿಂದಲೇ (2ನೇ ಪುಟಕ್ಕೆ)

### ಆಂಧ್ರದ 262 ವಿದ್ಯಾರ್ಥಿಗಳಿಗೆ ಕೊರೊನಾ

ಅಮರಾವತಿ, ನ. 5 – ಆಂಧ್ರ ಪ್ರದೇಶದ 262 ವಿದ್ಯಾರ್ಥಿಗಳು ಹಾಗೂ 160 ಶಿಕ್ಷಕರಲ್ಲಿ ಕೊರೊನಾ ಸೋಂಕಿರುವುದು ಕಂಡು ಬಂದಿದೆ. ನವೆಂಬರ್ 2ರಿಂದ ರಾಜ್ಯದಲ್ಲಿ 9 ಹಾಗೂ 10ನೇ ತರಗತಿಗಳನ್ನು ಪುನರಾರಂಭಿಸಲಾಗಿತ್ತು.

ಆದರೆ, ಕೊರೊನಾ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಶಾಲೆಗೆ ಹಾಜರಾಗುವವರ ಸಂಖ್ಯೆ ಪರಿಗಣಿಸಿದಾಗ ಈ ಸಂಖ್ಯೆ ಹೆಚ್ಚೇನೂ ಅಲ್ಲ ಎಂದು ಶಾಲಾ ಶಿಕ್ಷಣ ಆಯುಕ್ತ ವಿ. ಚಿನ್ನ ವೀರಭದ್ರುಡು ಹೇಳಿದ್ದಾರೆ.

ನಿನ್ನೆ ಸುಮಾರು 4 ಲಕ್ಷ ವಿದ್ಯಾರ್ಥಿಗಳು ಶಾಲೆಗಳಿಗೆ ಬಂದಿದ್ದಾರೆ. (3ನೇ ಪುಟಕ್ಕೆ)

### ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆಗೆ ಆಗ್ರಹಿಸಿ ಹೆದ್ದಾರಿ ತಡೆ

ದಾವಣಗೆರೆ, ನ.5- ರೈತ, ಕಾರ್ಮಿಕ, ಜನ ವಿರೋಧಿ ನೀತಿಗಳನ್ನು ವಿರೋಧಿಸಿ ಹಾಗೂ ರೈತ ಬೆಳೆಯುವ ಬೆಳೆಗಳಿಗೆ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ವೈಜ್ಞಾನಿಕ ಬೆಂಬಲ ಬೆಲೆ ಘೋಷಿಸಬೇಕೆಂದು ಆಗ್ರಹಿಸಿ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ) ಮತ್ತು ರೈತ ಐಕ್ಯತಾ ಹೋರಾಟ ಸಮಿತಿ ಜಂಟಿಯಾಗಿ ನಗರದಲ್ಲಿ ಇಂದು ಹೆದ್ದಾರಿ ತಡೆಯುವ ಮೂಲಕ ಪ್ರತಿಭಟನೆ ನಡೆಸಿದವು.

ಜಿಲ್ಲಾ ಪಂಚಾಯತಿ ಮುಂಭಾಗದಲ್ಲಿನ ರಾಷ್ಟ್ರೀಯ ಹೆದ್ದಾರಿ-4ರಲ್ಲಿ ಜಮಾಯಿಸಿದ್ದ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೆ ತರುತ್ತಿರುವುದನ್ನು ಖಂಡಿಸಿ ಆಕ್ರೋಶ ವ್ಯಕ್ತಪಡಿಸುತ್ತಾ ಹೆದ್ದಾರಿ ತಡೆ ನಡೆಸಿ ಕೇಂದ್ರ ಮತ್ತು (2ನೇ ಪುಟಕ್ಕೆ)

### ತುಂಗಭದ್ರಾ ನದಿ ಪುಷ್ಕರ ಮೇಳ



ರಾಯಚೂರು, ನ.5 - ಇದೇ 20 ರಿಂದ ಡಿಸೆಂಬರ್ 1 ರವರೆಗೆ ತುಂಗಭದ್ರಾ ನದಿ ಪುಷ್ಕರ ಮೇಳ ನಡೆಯಲಿದೆ ಎಂದು ಶ್ರೀ ರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

ಗುರುವಾರ ಮಠದಲ್ಲಿ ಪತ್ರಿಕಾಗೋಷ್ಠಿ ಯನ್ನು ದ್ದೇಶಿಸಿ ಮಾತನಾಡಿದ ಅವರು, ಪುಷ್ಕರ ಮೇಳದ ಹಿನ್ನೆಲೆಯಲ್ಲಿ ಮಂತ್ರಾಲಯದಲ್ಲಿ ಭಕ್ತರ ಅನುಕೂಲಕ್ಕಾಗಿ ಸ್ನಾನಘಟ್ಟಗಳನ್ನು (3ನೇ ಪುಟಕ್ಕೆ)

### ಮಸೀದಿಗಳ ಧ್ವನಿವರ್ಧಕ ನಿಷೇಧ



ಬೆಂಗಳೂರು, ನ. 5 - ರಾಜ್ಯಾದ್ಯಂತ ಇರುವ ಮಸೀದಿ ಗಳಿಗೆ ಅಳವಡಿಸಿರುವ ಧ್ವನಿ ವರ್ಧಕಗಳನ್ನು ನಿಷೇಧಿಸಿ, ಸರ್ಕಾರ ಆದೇಶ ಹೊರಡಿಸಿರುವುದಲ್ಲದೆ, ಅವುಗಳನ್ನು ತಕ್ಷಣ ದಿಂದ ತೆರವುಗೊಳಿಸಲು ಸೂಚಿಸಲಾಗಿದೆ.

ಈ ಸಂಬಂಧ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಎಲ್ಲಾ ಪೊಲೀಸ್ ಆಯುಕ್ತರು ಮತ್ತು ಜಿಲ್ಲಾ ವರಿಷ್ಠರಿಗೆ ಈ ಸೂಚನೆ ನೀಡಿದ್ದಾರೆ. ಮಸೀದಿಗಳಲ್ಲಿ ಮುಸ್ಲಿಂ ಬಾಂಧವರು ಸಲ್ಲಿಸುವ ಪ್ರಾರ್ಥನೆಯಲ್ಲಿ ಹೆಚ್ಚು ಧ್ವನಿ ಉಂಟಾಗುತ್ತಿರುವುದರಿಂದ ಅನೇಕ ತೊಂದರೆಗಳು ಎದುರಾಗುತ್ತಿವೆ. ಈ ಹಿನ್ನೆಲೆಯಲ್ಲಿ ಮಸೀದಿಗಳಲ್ಲಿನ ಧ್ವನಿವರ್ಧಕಗಳನ್ನು ತೆರವುಗೊಳಿಸಬೇಕೆಂದು ಸೂಚಿಸಲಾಗಿದೆ.

### 32 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ

ಬೆಂಗಳೂರು, ನ.5 - ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು 32 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆ ಕೈಗೊಳ್ಳುವ ಗುರಿಯನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ. ಪೂರ್ವ ಸಿದ್ದತೆಗಳ ಬಗ್ಗೆ ಅಧಿಕಾರಿಗಳೊಟ್ಟಿಗೆ ಚರ್ಚೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಗುರಿಯನ್ನು ತಲುಪಲು ರೈತರಿಗೆ ಅಗತ್ಯವಾದ ಎಲ್ಲಾ (3ನೇ ಪುಟಕ್ಕೆ)


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 05-11-2020ರ ಗುರುವಾರ ನಿಧನರಾದ
ಶ್ರೀ ವೀರ ಹನುಮಾನ್ ಆಗ್ರೋ ರೈಸ್‌ಟೆಕ್ ಮಾಲೀಕರಾದ
**ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್‌ಜೀ**
ಅವರಿಗೆ
ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ನಿಂಗರಾಜ್ ✦ ಗಣೇಶ್ ✦ ವಿಶ್ವನಾಥ್ ✦ ಅಣ್ಣಪ್ಪ ✦ ಪ್ರಕಾಶ್ ✦ ಜಯಣ್ಣ ✦ ಭೀಮಣ್ಣ ✦ ಬಸವರಾಜ್ ✦ ಮಣಿಕಂಠ ಹಾಗೂ ಶ್ರೀ ವೀರ ಹನುಮಾನ್ ಆಗ್ರೋ ರೈಸ್ ಟೆಕ್ ಸಿಬ್ಬಂದಿ ವರ್ಗ, ದಾವಣಗೆರೆ.



**ಸಂಘವಿ ಶೇಜ್‌ಮಲ್ ದೀಪ್‌ಚಂದ್‌ಜೀ ನಿಧನ**



ದಾವಣಗೆರೆಯ
ಷಾ ವೀರ್‌ಚಂದ್ ಅಸಲಾಜಿ ಅಂಡ್ ಕೋ.,
ಶ್ರೀ ವೀರಹನುಮಾನ್ ರೈಸ್‌ಮಿಲ್ ಮತ್ತು
ಶ್ರೀ ವೀರಹನುಮಾನ್ ಆಗ್ರೋ
ರೈಸ್‌ಟೆಕ್ ಮಾಲೀಕರೂ,
ಶ್ರೀ ಸುಪಾರ್ಶ್ವನಾಥ್ ಜೈನ್ ಮೂರ್ತಿ ಪೂಜಕ್
ಸಂಘದ ಟ್ರಸ್ಟಿಗಳೂ, ನರಸರಾಜ ರಸ್ತೆಯ
ಶ್ರೀ ಆದಿನಾಥ್ ಜೈನ್ ಮಂದಿರದ ಅಧ್ಯಕ್ಷರೂ ಆದ
**ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್‌ಜೀ**
ಅವರು ದಿನಾಂಕ 05.11.2020ರ ಗುರುವಾರ
ರಾತ್ರಿ 8 ಕ್ಕೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ
ನಿಧನರಾದರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರರು, ಮೂವರು ಪುತ್ರಿಯರು,
ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 06.11.2020ರ ಶುಕ್ರವಾರ
ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಸಹೋದರರು : ಷಾ ಚಗನ್‌ಲಾಲ್, ರಾಜೇಂದ್ರಕುಮಾರ್, ಪುತ್ರರು : ಕುಮಾರ್‌ಪಾಲ್, ಶ್ರೀಪಾಲ್

# ಮಲೇಬೆನ್ನೂರು ಪುರಸಭೆ : ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರಿಕೆಗೆ ತೀರ್ಮಾನ

**ಜಿಗಳಿ ಪ್ರಕಾಶ್**

ಮಲೇಬೆನ್ನೂರು, ನ.5- ಇಲ್ಲಿನ ಪುರಸಭೆಯ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಶುಕ್ರವಾರ ಚುನಾವಣೆ ನಡೆಯಲಿದ್ದು, ಅಧ್ಯಕ್ಷ-ಉಪಾಧ್ಯಕ್ಷರು ಯಾರಾಗುತ್ತಾರೆಂಬುದು ಗುರುವಾರ ರಾತ್ರಿವರೆಗೂ ನಿಗೂಢವಾಗಿತ್ತು.

ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲಾಗಿದ್ದು, ನಾಳೆ ಶುಕ್ರವಾರ ಬೆಳಿಗ್ಗೆ 10.30 ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

**ಹೊಂದಾಣಿಕೆ ಗೊಂದಲ :** ಈ ಹಿಂದೆ ಎರಡೂವರೆ ವರ್ಷ ಪುರಸಭೆಯಲ್ಲಿ ಜೆಡಿಎಸ್-ಬಿಜೆಪಿ ಹೊಂದಾಣಿಕೆ ಮಾಡಿಕೊಂಡು ಅಧಿಕಾರ ನಡೆಸಿದ್ದರು. ಅಂದು ಅಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲಾಗಿದ್ದರಿಂದ ಜೆಡಿಎಸ್‌ನ ಶ್ರೀಮತಿ ಅಂಜಿನಮ್ಮ ವಿಜಯಕುಮಾರ್ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷ ಸ್ಥಾನ ಸಾಮಾನ್ಯವಾಗಿದ್ದರಿಂದ ಬಿಜೆಪಿಯ ಬಿ.ಎಂ. ಚನ್ನೇಶ್‌ಸ್ವಾಮಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಹಿಂದಿನ ಒಪ್ಪಂದದಂತೆ ಈಗ ಬಿಜೆಪಿಗೆ ಅಧ್ಯಕ್ಷ ಸ್ಥಾನ ಮತ್ತು ಜೆಡಿಎಸ್‌ಗೆ ಉಪಾಧ್ಯಕ್ಷ ಹಂಚಿಕೆ ಆಗಬೇಕಿತ್ತು. ಆದರೆ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹರಿಹರ ನಗರಸಭೆಯಲ್ಲಿ ಜೆಡಿಎಸ್‌ಗೆ ನಾವು ಅಧ್ಯಕ್ಷ ಸ್ಥಾನ ಬಿಟ್ಟುಕೊಟ್ಟಿದ್ದೇವೆ. ಇಲ್ಲಿ ನಮಗೆ ಅಧ್ಯಕ್ಷ ಸ್ಥಾನ ಕೊಡಿ ಎಂದು ಶಾಸಕ ಎಸ್. ರಾಮಪ್ಪ ಸೇರಿದಂತೆ ಕಾಂಗ್ರೆಸ್ ಸದಸ್ಯರು ಪಟ್ಟುಹಿಡಿದರು. ಇದಕ್ಕೆ ಒಪ್ಪದ ಜೆಡಿಎಸ್ ಮುಖಂಡರು ಹಾಗೂ ಸದಸ್ಯರು ಅಧ್ಯಕ್ಷ ಸ್ಥಾನವನ್ನು ಮೊದಲ 2 ತಿಂಗಳು ನಮಗೆ ಕೊಡಿ. ನೀವು ಉಪಾಧ್ಯಕ್ಷ ಸ್ಥಾನ ಹಾಗೂ ಸ್ಥಾಯಿ ಸಮಿತಿ ತೆಗೆದುಕೊಳ್ಳಿ. 2 ತಿಂಗಳ ನಂತರ ಅಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡುತ್ತೇವೆ ಎಂಬ ಬೇಡಿಕೆ ಇಟ್ಟರು.

ಈ ಕುರಿತು ಕಾಂಗ್ರೆಸ್-ಜೆಡಿಎಸ್ ಮುಖಂಡರ ಮಾತುಕತೆಗಳು ಕಳೆದ ಒಂದು ವಾರದಿಂದ ನಡೆದುಕೊಂಡು ಬಂದಿದ್ದವು. ಗುರುವಾರ ಸಂಜೆ ಶಾಸಕ ಎಸ್.ರಾಮಪ್ಪ ಅವರು ಸ್ವತಃ ಮಲೇಬೆನ್ನೂರಿಗೆ ಬಂದು ಸದಸ್ಯರನ್ನು ಒಪ್ಪಿಸಿ ಮೊದಲ 3 ತಿಂಗಳು ಜೆಡಿಎಸ್‌ಗೆ ಅಧ್ಯಕ್ಷ ಸ್ಥಾನ ನೀಡುವ ತೀರ್ಮಾನ ಕೈಗೊಂಡರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಅವರಿಗೆ ವಿಷಯ ತಿಳಿಸಿದರು. ಆದರೆ ಆ ವೇಳೆಗಾಗಲೇ ಜೆಡಿಎಸ್ ಸದಸ್ಯರು ಬಿಜೆಪಿ ಜೊತೆಯಲ್ಲೇ ಹೊಂದಾಣಿಕೆ ಮುಂದುವರೆಸಲು ಮತ್ತು ಅಧ್ಯಕ್ಷ - ಉಪಾಧ್ಯಕ್ಷ ಸ್ಥಾನಗಳನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ಒಪ್ಪಿದೆ ಎಂಬ ಮಾಹಿತಿ ಲಭ್ಯವಾಯಿತು ಎನ್ನಲಾಗಿದೆ.

## ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಇಂದು ಚುನಾವಣೆ


ನಹೀದಾ ಅಂಜುಂ ಕೋಂ ಸೈಯದ್ ಇಸ್ರಾರ್, 22ನೇ ವಾರ್ಡ್


ಶ್ರೀಮತಿ ಅಂಜಿನಮ್ಮ ಕೋಂ ವಿಜಯಕುಮಾರ್, 8ನೇ ವಾರ್ಡ್

ಬಿಜೆಪಿ ಮುಖಂಡ ಹಾಗೂ ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಅವರು ಈ ಹಿಂದಿನ ಮಾತುಕತೆಯ ಪ್ರಕಾರ ಅಧ್ಯಕ್ಷ ಸ್ಥಾನ ನಮಗೆ ಕೊಡಿ. ನಾವು-ನೀವು ಹೊಂದಾಣಿಕೆಯಿಂದ ಹೋಗೋಣ ಎಂಬ ಮಾತನ್ನು ಜೆಡಿಎಸ್ ಮುಖಂಡರ ಬಳಿ ಚರ್ಚಿಸಿದ್ದರು.

ಆಗ ಜೆಡಿಎಸ್ ಮುಖಂಡರು ಹರಿಹರ ನಗರಸಭೆಯಲ್ಲಿ ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದೇವೆ. ಅಲ್ಲಿ ಅವರು ನಮಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಟ್ಟಿದ್ದಾರೆ. ಇಲ್ಲಿ ನಾವು ಅವರಿಗೆ ಬಿಟ್ಟುಕೊಡಬೇಕು. ಈ ಬಗ್ಗೆ ಸದಸ್ಯರ ಜೊತೆ ಮಾತನಾಡಿ, ಅಭಿಪ್ರಾಯ ತಿಳಿಸುತ್ತೇವೆ ಎಂದಿದ್ದರು. ಆದರೆ ಜೆಡಿಎಸ್ ಸದಸ್ಯರು ಅಧ್ಯಕ್ಷ ಸ್ಥಾನ ಕೊಡುವವರ ಜೊತೆ ನಾವು ಹೋಗುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ಗುರುವಾರ ರಾತ್ರಿ ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಹಾಗೂ ಬಿಜೆಪಿ ಸದಸ್ಯರು ಮೊದಲ 2 ತಿಂಗಳು ಜೆಡಿಎಸ್‌ಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ಒಪ್ಪಿಕೊಳ್ಳುವ ಮೂಲಕ ಹಿಂದಿನ ಮೈತ್ರಿ ಮುಂದುವರೆಸಿಕೊಂಡು ಹೋಗಲು ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ.

2 ತಿಂಗಳ ನಂತರ ಉಳಿದ 4 ತಿಂಗಳು ಬಿಜೆಪಿಗೆ ಅಧ್ಯಕ್ಷ ಸ್ಥಾನ ಮತ್ತು ಉಪಾಧ್ಯಕ್ಷ ಪೂರ್ತಿ ಅವಧಿ ಜೆಡಿಎಸ್‌ಗೆ ಹಾಗೂ ಸ್ಥಾಯಿ ಸಮಿತಿ ಪೂರ್ತಿ ಅವಧಿ ಬಿಜೆಪಿಗೆ ಎಂಬ ಮಾತುಕತೆ ನಡೆದಿದೆ ಎಂದು ತಿಳಿದು ಬಂದಿದೆ.

ನಿರೀಕ್ಷೆಯಂತೆ ನಡೆದರೆ 22 ನೇ ವಾರ್ಡಿನ ಜೆಡಿಎಸ್ ಸದಸ್ಯೆ ಶ್ರೀಮತಿ ನಾಹಿದಾ ಅಂಜುಂ ಸೈಯದ್ ಇಸ್ರಾರ್ ಅಧ್ಯಕ್ಷರಾಗಿ ಮತ್ತು 8ನೇ ವಾರ್ಡಿನ ಜೆಡಿಎಸ್ ಸದಸ್ಯೆ ಶ್ರೀಮತಿ ಅಂಜಿನಮ್ಮ ವಿಜಯಕುಮಾರ್ ಉಪಾಧ್ಯಕ್ಷರಾಗಿ ಆಯ್ಕೆಯಾಗುವುದು ಪಕ್ಕಾ ಆಗಲಿದೆ.

ಇತ್ತ ಕಾಂಗ್ರೆಸ್ ಸದಸ್ಯರೂ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಸ್ಪರ್ಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

**ಪಕ್ಷಗಳ ಬಲಾಬಲ :** ಒಟ್ಟು 23 ಸದಸ್ಯರ ಮಲೇಬೆನ್ನೂರು ಪುರಸಭೆಯಲ್ಲಿ ಕಾಂಗ್ರೆಸ್-9, ಬಿಜೆಪಿ-7, ಜೆಡಿಎಸ್-5 ಮತ್ತು ಇಬ್ಬರು ಪಕ್ಷೇತರರು ಇದ್ದಾರೆ. ಬಿಜೆಪಿ-ಜೆಡಿಎಸ್ ಮೈತ್ರಿ ಜೊತೆ ಪಕ್ಷೇತರ ಸದಸ್ಯರು ಹೋಗುವ ಸಾಧ್ಯತೆ ಹೆಚ್ಚಿದೆ.

**ಯಶಸ್ವಿ :** ಕಾದು ನೋಡುವ ತಂತ್ರದ ಮೂಲಕ ಅಧಿಕಾರ ಉಳಿಸಿಕೊಳ್ಳುವಲ್ಲಿ ವಾಗೀಶ್‌ಸ್ವಾಮಿ ಯಶಸ್ವಿಯಾದರು.

ಈ ಹಿಂದಿನ ತೀರ್ಮಾನದಂತೆ ಯಾವುದೇ ಮಾತುಕತೆ ಅಥವಾ ಬೇಡಿಕೆ ಇಲ್ಲದಂತೆ ಜೆಡಿಎಸ್‌ನವರು ಬಿಜೆಪಿಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡಬೇಕಿತ್ತು. ಆದರೆ, ಅವರು ಹಾಗೆ ಮಾಡದಿದ್ದಾಗ ಮತ್ತು ಕಾಂಗ್ರೆಸ್ ಪಕ್ಷದವರ ಜೊತೆ ಜೆಡಿಎಸ್ ಮಾತುಕತೆ ನಡೆಸುತ್ತಿದೆ ಎಂಬ ವಿಷಯ ತಿಳಿದಿದ್ದರೂ ತಾಳ್ಮೆಯಿಂದಲೇ ಕಾದು ನೋಡುವ ತಂತ್ರ ಅನುಸರಿಸಿ, ಕೊನೆಗೂ ಜೆಡಿಎಸ್‌ನವರು ತಮ್ಮ ಬಳಿಯೇ ಬರುವಂತೆ ಮಾಡಿಕೊಂಡು ಅಧ್ಯಕ್ಷ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟರೂ ಪುರಸಭೆಯಲ್ಲಿ ಅಧಿಕಾರದ ಜುಟ್ಟು ಹಿಡಿದುಕೊಳ್ಳುವಲ್ಲಿ ಮತ್ತು ಕಾಂಗ್ರೆಸ್‌ನವರನ್ನು ಅಧಿಕಾರದಿಂದ ದೂರವಿಡುವಲ್ಲಿ ವಾಗೀಶ್‌ಸ್ವಾಮಿ ಅವರು ಯಶಸ್ಸು ಸಾಧಿಸಿದ್ದಾರೆ.


**ಸೈಟುಗಳು ಮಾರಾಟಕ್ಕೆ**
ವಾಜಪೇಯಿ ಲೇಔಟ್ 30x30 ಉತ್ತರ-ಪಶ್ಚಿಮ, ಜರೇಕಟ್ಟೆ. ಮುಖ್ಯರಸ್ತೆಯಲ್ಲಿ 14000 ಚದುರಡಿ ಏಕ ಖಾಲಿ ನಿವೇಶನ
ಶಾಮನೂರು ಧನ್ಯಕುಮಾರ್ ಮತ್ತು ಸ್ವಾಮಿ, ಏಜೆಂಟರ್
97415 62589
97421 44715

**ಮನೆ ಬಾಡಿಗೆ ಇದೆ**
S.S. ಬಡಾವಣೆ 'ಎ' ಬ್ಲಾಕ್, 2 ಬೆಡ್‌ರೂಂ ಪೂರ್ವ ಬಾಗಿಲು ಶಾಮನೂರು ರಸ್ತೆಗೆ ಹತ್ತಿರ, ಕರ್ನಾಟಕ ಬ್ಯಾಂಕ್ ಹಿಂಭಾಗ, ಮೊದಲನೆ ಮಹಡಿಯಲ್ಲಿ
ನಾಗಭೂಷಣ
97407 23330

**ಸೈಟುಗಳು ಮಾರಾಟಕ್ಕೆ**
ಶಿವಕುಮಾರ ಸ್ವಾಮಿ - 30x40 ಪೂರ್ವ
ಮಹಾಲಕ್ಷ್ಮಿ ಲೇಔಟ್ - 30x40 ದಕ್ಷಿಣ
ರಶ್ಮಿ ಹಾಸ್ಟೆಲ್ ಹತ್ತಿರ - 30x70 & 30x45, 29x70 ಪೂರ್ವ
ಮಂಜುನಾಥ್, ಏಜೆಂಟ್
98444 91792

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.


## 40 ಪಟ್ಟು ಹೆಚ್ಚಿನ ಸೋಂಕಿತರು!

(1ನೇ ಪುಟದಿಂದ) ಯಾದಗಿರಿ, ಕಲಬುರಗಿ, ಕೋಲಾರ, ಕೊಡಗು, ಮಂಡ್ಯ, ಚಿಕ್ಕಮಗಳೂರು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಹಾಗೂ ಹಾಸನಗಳಲ್ಲಿ ಪತ್ತೆಯಾಗದ ಪ್ರಕರಣಗಳು 40 ಪಟ್ಟಿಗೂ ಹೆಚ್ಚಾಗಿವೆ ಎಂದು ತಿಳಿಸಲಾಗಿದೆ.


**ಮನೆ ಮಾರಾಟಕ್ಕೆ**
ಶಿವಪಾರ್ವತಿ ಲೇಔಟ್‌ನಲ್ಲಿ ಮನೆ ಮಾರಾಟಕ್ಕಿದೆ ಹೊಸಮನೆ 30x40 ಗ್ರೌಂಡ್ ಮತ್ತು ಮೊದಲನೇ ಮಹಡಿಯಲ್ಲಿ
ಶಾಮನೂರು ಧನ್ಯಕುಮಾರ್ ಮತ್ತು ಸ್ವಾಮಿ, ಏಜೆಂಟರ್
97415 62589
97421 44715

**PG ಬಿಲ್ಡಿಂಗ್ ಬಾಡಿಗೆಗೆ ಇದೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್ , ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484 42694
99725 35329

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು, ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ.
73495 98347, 94481 25056

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆ ಮತ್ತು ಸೈಟುಗಳು ಮಾರಾಟಕ್ಕಿವೆ**
30x50 North ಮನೆ 40x60
40x60, South ಅಕ್ಕ-ಪಕ್ಕ, 50x80 South, 50x80 west, 40x60 North, 40x60 East
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹೋಂ ನರ್ಸ್**
ಯಾವುದೇ ರೀತಿಯ ರೋಗಿಗಳನ್ನು ನಿಮ್ಮ ಮನೆಗಳಿಗೇ ಬಂದು ಆರೈಕೆ ಮಾಡಲು ನಮ್ಮಲ್ಲಿ ಹೋಂ ನರ್ಸ್ ಲಭ್ಯವಿದ್ದಾರೆ.
81230 41446

**ಮಾರಾಟಕ್ಕೆ ಇವೆ**
1) Activa Honda Scooter
2) Yamha FZ Bike
3) ಕಲರ್ T.V. ಗಳು
4) ಕಾಟ್‌ಗಳು
5) ಸಿಂಟೆಕ್ಸ್ ವಾಟರ್ ಟ್ಯಾಂಕ್ (1000 Liter)
ಇವುಗಳು ಮಾರಾಟಕ್ಕಿವೆ ಸಂಪರ್ಕಿಸಿ:
94812 47552

**ಸೈಟು ಮತ್ತು ಮನೆ ಮಾರಾಟಕ್ಕೆ ಬೇಕಾಗಿದೆ**
ವಿದ್ಯಾನಗರ, ತರಳಬಾಳು, ಸ್ವಾಮಿ ವಿವೇಕಾನಂದ, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಬೇಕಾಗಿದೆ. ಆಸಕ್ತರು ತಿಳಿಸಿರಿ
98809 33630

**ಮಾರಾಟಕ್ಕಿವೆ**
ತೋಟ ಹಾಗೂ ಹೊಲಕ್ಕೆ ಉಪಯುಕ್ತವಾಗುವ 5 ಅಡಿ, 10 ಅಡಿ, 12 ಅಡಿ, 18 ಅಡಿಯ ಸಿಮೆಂಟ್ ಮುರಿದಿರುವ (Fensing) ಕಂಬ ಮಾರಾಟಕ್ಕಿವೆ.
99649 44063

**ಬೇಕಾಗಿದ್ದಾರೆ**
ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ : ಶಾಮನೂರು ಶಾಪೆ
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ. 98803-10567

**WANTED**
Experienced Person For Counter Sale
Contact
88844 42047
Mail id:
shivalingappa@comfortsleep.in

**ಬೇಕಾಗಿದ್ದಾರೆ**
ಸ್ಟೀಲ್ ಫರ್ನಿಚರ್ ಅಂಗಡಿಯಲ್ಲಿ Tally Acount ಮಾಡಲು ಬೇಕಾಗಿದ್ದಾರೆ. ವಿಚಾರಿಸಿರಿ.
ನಯನ ಏಜನ್ಸೀಸ್
ಚಾಮರಾಜ ಪೇಟೆ, ದಾವಣಗೆರೆ.
99162 36521

**ಮನೆ ಮಾರಾಟಕ್ಕೆ ಇದೆ**
ಹಳೇಪೇಟೆ 85x14 ಅಳತೆಯ ದಕ್ಷಿಣ ದಿಕ್ಕಿನ ವಾಸಕ್ಕೆ ಯೋಗ್ಯವಾದ ಮನೆ ಮಾರಾಟಕ್ಕೆ ಇದೆ.
99161 81680

**ಚಿತ್ರದುರ್ಗದಲ್ಲಿರುವ ಸೈಟ್ ಮಾರಾಟಕ್ಕಿದೆ**
ಅಳತೆ 30x40, ಪಶ್ಚಿಮ ದಿಕ್ಕು KSRTC ಬಸ್ ಸ್ಟ್ಯಾಂಡ್‌ನಿಂದ 2.ಕಿ.ಮೀ ದೂರದಲ್ಲಿದೆ ಮರುಳಪ್ಪ ಬಡಾವಣೆ, ಮೆದೆಹಳ್ಳಿ ರಸ್ತೆ, ಚಿತ್ರದುರ್ಗ.
ಸಂಪರ್ಕಿಸಿ:
94488 43914

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ ತರಳಬಾಳು ಬಡಾವಣೆ ಕಾಫಿ ಡೇ ಹತ್ತಿರ ಮೊದಲ ಮಹಡಿಯಲ್ಲಿ 1 ಮತ್ತು 2 BHK ಮನೆ, 2ನೇ ಮಹಡಿಯಲ್ಲಿ ಅಟ್ಯಾಚ್ಡ್ ರೂಂ ಬಾಡಿಗೆಗೆ ಇದೆ.
94497 59471
72047 70328

**2 BHK ಮನೆ ಬಾಡಿಗೆಗೆ ಇದೆ**
#3626/11, "ಓಂ ಕೃಪ", ಮಹಾಲಕ್ಷ್ಮಿ ಲೇಔಟ್, ಕುಂದವಾಡ ರಸ್ತೆ, ಶಿವಗಂಗಾ ಕನ್ವೆನ್ಷನಲ್ ಸೆಂಟರ್ ಹತ್ತಿರ, ಗ್ರೌಂಡ್‌ಫ್ಲೋರ್‌ನಲ್ಲಿ ವಾಸ್ತು ಪ್ರಕಾರ ಇರುವ ಮತ್ತು ಪಾರ್ಕಿಂಗ್, ಸೋಲಾರ್, ಬೋರ್ ನೀರಿನ ಸೌಲಭ್ಯವಿದ್ದು, ಸುಸಜ್ಜಿತವಾಗಿರುವ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ ವಿಚಾರಿಸಿ.
91643 02283

**ಮನೆಗಳು ಬಾಡಿಗೆಗೆ**
ವಾಸ್ತು ಪ್ರಕಾರ ಪೂರ್ವ ದಿಕ್ಕು ಇರುವ 2 ಬೆಡ್ ರೂಂ, ನಲ್ಲಿ ನೀರು, ಬೋರ್ ನೀರು ಹೊಂದಿರುವ ಫಸ್ಟ್ ಫ್ಲೋರ್ ಮನೆ ಶಿವಕುಮಾರ ಸ್ವಾಮಿ ನಗರ, 2ನೇ ಹಂತ, ಹದಡಿ ರಸ್ತೆಯಲ್ಲಿ ಮನೆ ಬಾಡಿಗೆಗೆ ಇದೆ.
94481 78626

**ಶ್ರೀ ಗುರುದತ್ತ ಮಹಿಳಾ ಪೇಯಿಂಗ್ ಗೆಸ್ಟ್ (P.G) & ಮೆಸ್**
ಸುಸಜ್ಜಿತವಾದ ವಸತಿ ಹಾಗೂ ಶುಚಿ-ರುಚಿಯಾದ ಊಟ-ಉಪಹಾರದ ವ್ಯವಸ್ಥೆಯಿರುವ ಮಹಿಳಾ ಪಿ.ಜಿ. ಲಾಯರ್ ರೋಡ್, ದಾವಣಗೆರೆ.
86183 21465

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ಅಕೌಂಟೆಂಟ್ ಬೇಕಾಗಿದ್ದಾರೆ**
ಟ್ಯಾಲಿ ಅನುಭವವಿರುವವರು ಬೇಕಾಗಿದ್ದಾರೆ.
ಬಯೋಡೇಟಾದೊಂದಿಗೆ ಸಂಪರ್ಕಿಸಿ :
ಸಮಯ: ಬೆ.11.30ರಿಂದ ಸಂಜೆ 5.00ರವರೆಗೆ
ಫೋ. : 08192 254736

**Wanted**
Sales Person 5 No's
PUC, Any Degree
Accountant - 5 No's
Qualifiction - BBM, MBA, B.Com, M.Com
Hullumane Properties & Power Pvt Ltd
95135 03000

GST Registration, INCOME TAX & GST CASES, Project Reports, and for Account Maintenances.
Contact :
MEGHANA ASSOCIATES (R)
(M) : 99809 16126

**ತಕ್ಷಣ ಬೇಕಾಗಿದ್ದಾರೆ**
ದೋಸೆ ಭಟ್ಟರು ಹಾಗೂ ತಿಂಡಿ ಭಟ್ಟರು ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇರುತ್ತದೆ. ಸಮಯ: ಬೆಳಿಗ್ಗೆ 6 ರಿಂದ ಮಧ್ಯಾಹ್ನ 3ರವರಗೆ
ಸಂಪರ್ಕಿಸಿ:
63641 43846

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**Fully Furnished House For Rent in sarswvasthi Nagar**
2nd Floor, with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451


**SSLC, PUC ಪಾಸ್/ಫೇಲ್ ಮುಂದೇನು?**
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ 6 ತಿಂಗಳ ಟ್ರೈನಿಂಗ್ ನಂತರ ನರ್ಸ್ ಕೆಲಸ.
ನೇರ ಪರೀಕ್ಷೆಗಳು : NTC, SSLC, PUC
ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಫೋ. : 86602 35013

ಶಿರಸಿ ಶ್ರೀ ಮಾರಿಕಾಂಬ ದೇವಿ
**ಜ್ಯೋತಿಷ್ಯ ಕೇಂದ್ರ**
ನಿಮ್ಮ ಜೀವನದ ಸುಖ-ದುಃಖ, ಸರ್ವ ಸಮಸ್ಯೆಗಳಿಗೆ ಪರಿಹಾರ ಸಿಗದೇ ನೊಂದಿದ್ದರೆ, ನಿಮ್ಮ ಯಾವುದೇ ಇಷ್ಟಪಟ್ಟ ಕಾರ್ಯಗಳನ್ನು ಇಲ್ಲಿ ಅತೀ ಶೀಘ್ರದಲ್ಲಿ 100% ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಪಂ. ಶ್ರೀನಿವಾಸ ಭಟ್ಟರ್ ವಂಶ ಪಾರಂಪರಿಕ ಜ್ಯೋತಿಷ್ಯರು
ಮೊ. 97407-69784
ಮನೆ ವಿಳಾಸ : ಎಂ.ಸಿ.ಸಿ. 'ಎ' ಬ್ಲಾಕ್, ಶ್ರೀ ಸಾಯಿ ಬಾಬಾ ಮಂದಿರದ ಹತ್ತಿರ, ದಾವಣಗೆರೆ.

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 05.11.2020ರ ಗುರುವಾರ ಮತ್ತು 06.11.2020ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಹೆಸರು ದೃಢೀಕರಣ**
ನಾನು ಶ್ರೀ ಬಸವರಾಜ ಎಂ. ಬಿನ್ ಮಹದೇವಪ್ಪ 27 ವರ್ಷ ತ್ಯಾವಣಗಿ, ದಾವಣಗೆರೆ ವಾಸಿಯಾದ ನಾನು ನನ್ನ ಆಧಾರ್ ಕಾರ್ಡ್‌ನಲ್ಲಿ ಬಸವರಾಜ ಎಂ. ಬಿನ್ ಮಹದೇವಪ್ಪ ಎಂದಿದ್ದು, ಡಿ.ಎಲ್. ನಲ್ಲಿ ಗೋಣಿ ಬಸಪ್ಪ ಎಂ. ಬಿನ್ ಮಹದೇವಪ್ಪ ಬಿ. ಎಂದಾಗಿದೆ. ಈ ಮೇಲ್ಕಂಡ ಎರಡೂ ಹೆಸರುಗಳು ನನ್ನದೇ ಎಂದು ದಿನಾಂಕ 5.11.2020 ರಂದು ನೋಟರಿ ದಾವಣಗೆರೆಯವರ ಮುಂದೆ ನಾನು ಇನ್ನು ಮುಂದೆ ಬಸವರಾಜ ಎಂ. ಬಿನ್ ಮಹದೇವಪ್ಪ ಎಂಬ ಹೆಸರನ್ನು ಮುಂದುವರೆಸಿಕೊಂಡು ಹೋಗುತ್ತೇನೆಂದು ಪ್ರಮಾಣೀಕರಿಸಿದ್ದೇನೆ.
ಸಹಿ/- ಬಸವರಾಜ ಎಂ.

**WANTED**
SALES MAN / SALES GIRLS, ASSISTANT SALES MAN
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**2ನೇ ವರ್ಷದ ಪುಣ್ಯಸ್ಮರಣೆ**

ಬಿ.ಆರ್. ದೇವೇಂದ್ರಪ್ಪ, ಲೋಕಿಕೆರೆ
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ, ನೀವು ಹಾಕಿ ಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ:
ಪತ್ನಿ : ಶ್ರೀಮತಿ ರೇಣುಕಮ್ಮ ದೇವೇಂದ್ರಪ್ಪ ಬಿ.ಆರ್. ಲೋಕಿಕೆರೆ
ಮಕ್ಕಳು : ♦ ಶ್ರೀಮತಿ ನೇತ್ರಾವತಿ ಶ್ರೀ ಕಣಸಾಳ ಅಂಜಿನಪ್ಪ ಮಕ್ಕಳು, ನಿಟ್ಟುವಳ್ಳಿ ವಂಶಸ್ಥರು.
♦ ಶ್ರೀಮತಿ ಸೌಮ್ಯ ಶ್ರೀ ಡಿ. ಅಣ್ಣಪ್ಪ ಮತ್ತು ಮಕ್ಕಳು, ಲೋಕಿಕೆರೆ ವಂಶಸ್ಥರು.
♦ ಶ್ರೀಮತಿ ಕವಿತ ಶ್ರೀ ಎಲ್. ಪ್ರಕಾಶ್ ಮತ್ತು ಮಕ್ಕಳು, ಹೊದಿಗೆರೆ ವಂಶಸ್ಥರು.
♦ ಶ್ರೀಮತಿ ಸುನಿತಾ ಶ್ರೀ ಮಾರುತಿ ಮತ್ತು ಮಕ್ಕಳು, ಕೆಳಗಳಹಟ್ಟಿ ವಂಶಸ್ಥರು.
♦ ಶ್ರೀ ಡಿ. ಅಣ್ಣಪ್ಪ, ಪತ್ರಿಕಾ ವಿತರಕರು, ದಾವಣಗೆರೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

NGO - ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ
ಸಂಪರ್ಕಿಸಿ:
MEGHANA ASSOCIATES (R)
(M) : 99809 16126

**ನೇರ ಪರೀಕ್ಷೆಗಳು**
S.S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369


**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||
**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ವಾಸಿ
ಶ್ರೀಮತಿ ಸೌಭಾಗ್ಯಮ್ಮ ಬೆಳ್ಳೂಡಿ ಮಲ್ಲಿಕಾರ್ಜುನಪ್ಪ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 29.10.2020ನೇ ಗುರುವಾರ ಮಧ್ಯಾಹ್ನ 3.20ಕ್ಕೆ ನನ್ನ ಪತಿಯವರಾದ
ಶ್ರೀ ಯಜಮಾನ್ ಗಂಗನಕಟ್ಟೆ ಬೆಳ್ಳೂಡಿ ಮಲ್ಲಿಕಾರ್ಜುನಪ್ಪನವರು
(ನಿವೃತ್ತ ವ್ಯವಸ್ಥಾಪಕರು, ದಾವಣಗೆರೆ ಅರ್ಬನ್ ಕೋ-ಆ. ಬ್ಯಾಂಕ್)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ' ಯನ್ನು
ದಿನಾಂಕ : 06.11.2020ನೇ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗೃಹ ಅಂಬಾಭವಾನಿ ದೇವಸ್ಥಾನದ ಹಿಂಭಾಗ, ಕೆ.ಬಿ. ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀಮತಿ ಸೌಭಾಗ್ಯಮ್ಮ ಬೆಳ್ಳೂಡಿ ಮಲ್ಲಿಕಾರ್ಜುನಪ್ಪ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು

**ಭಾವಪೂರ್ಣ ಶ್ರದ್ಧಾಂಜಲಿ**

ದಿನಾಂಕ 05.11.2020ರಂದು ನಿಧನರಾದ ಷಾ ವೀರ್‌ಚಂದ್ ಅಸಲಾಜಿ ಅಂಡ್ ಕೋ., ಶ್ರೀ ವೀರಹನುಮಾನ್ ರೈಸ್‌ಮಿಲ್ ಮತ್ತು ಶ್ರೀ ವೀರಹನುಮಾನ್ ಆಗ್ರೋ ರೈಸ್‌ಟೆಕ್ ಮಾಲೀಕರೂ ಹಾಗೂ ನಮ್ಮ ಆತ್ಮೀಯರೂ ಆದ
ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್‌ಜೀ
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.
♦ ಎಂ. ದೊಡ್ಡಪ್ಪ ವಿಶೇಷ ಆಹ್ವಾನಿತರು, ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್, ♦ ಡಿ. ಗಿರೀಶ್ ಮಾಲೀಕರು, ಎಂ. ದೊಡ್ಡಪ್ಪ ಅಂಡ್ ಸನ್ಸ್, ದಾವಣಗೆರೆ.
♦ ಸಿಬ್ಬಂದಿ ವರ್ಗ, ಶ್ರೀ ವೀರಹನುಮಾನ್ ರೈಸ್‌ಮಿಲ್


# ಬೆಂಬಲ ಬೆಲೆಗೆ ಆಗ್ರಹಿಸಿ ಹೆದ್ದಾರಿ ತಡೆ



**(1ನೇ ಪುಟದಿಂದ)** ರಾಜ್ಯ ಸರ್ಕಾರಗಳ ಗಮನ ಸೆಳೆದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್, ಕೇಂದ್ರ ಸರ್ಕಾರ ಮೆಕ್ಕೆಜೋಳಕ್ಕೆ 1850 ರೂ. ಬೆಂಬಲ ಬೆಲೆ ನಿಗದಿ ಮಾಡಿದೆ. ಆದರೆ ಸ್ಥಳೀಯ ಎಪಿಎಂಸಿ ಮಾರುಕಟ್ಟೆಯಲ್ಲಿ ವರ್ತಕರು, ದಲ್ಲಾಲರು 1050ರಿಂದ 1200 ರೂ.ನಂತೆ ಮೆಕ್ಕೆಜೋಳ ಖರೀದಿಸುತ್ತಿದ್ದಾರೆ. ರೈತರ ಶಾಲು ಹಾಕಿಕೊಂಡು ನಾನು ರೈತರ ಪರವಾಗಿದ್ದೇನೆಂದು ಮೊಸಳೆ ಕಣ್ಣೀರು ಸುರಿಸುವ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ವರ್ತಕರನ್ನು ನಿಯಂತ್ರಿಸುವ ಶಕ್ತಿ ಇಲ್ಲವೇ. ಇನ್ನೂ ಮುಂದೆ ರೈತರ ಶಾಲು ಹಾಕಿಕೊಳ್ಳುವುದಾದರೆ ಸರ್ಕಾರ ನಿಗದಿ ಮಾಡಿರುವ ದರಕ್ಕೆ ಕೃಷಿ ಉತ್ಪನ್ನಗಳು ಖರೀದಿ ಆಗುವಂತೆ ನೋಡಿಕೊಳ್ಳಬೇಕು. ಕ್ವಿಂಟಾಲ್ ಮೆಕ್ಕೆಜೋಳಕ್ಕೆ 3500 ರೂ. ವೈಜ್ಞಾನಿಕ ಬೆಂಬಲ ಬೆಲೆ ಘೋಷಿಸಬೇಕೆಂದು ಆಗ್ರಹಿಸಿದರು.

ಸದನದಲ್ಲಿ ಯಾವುದೇ ರೀತಿಯ ಚರ್ಚೆ ನಡೆಸದೆಯೇ ಭೂ ಸುಧಾರಣಾ ಮತ್ತು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದು ರಾಜ್ಯಪಾಲರ ಅಂಕಿತ ಹಾಕಿಸುವ ಮೂಲಕ ಆ ತಿದ್ದುಪಡಿಗಳನ್ನು ಹಿಂಬಾಗಿಲ ಮೂಲಕ ಜಾರಿ ಮಾಡಲು ಮುಂದಾಗಿರುವ ಸರ್ಕಾರದ ಅಪ್ರಜಾತಾಂತ್ರಿಕ ನೀತಿಯನ್ನು ರೈತರು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಆದ್ದರಿಂದ ತಕ್ಷಣವೇ ತಿದ್ದುಪಡಿಗಳನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಪಂಚಾಯತ್ ಸದಸ್ಯ ತೇಜಸ್ವಿ ಪಟೇಲ್ ಮಾತನಾಡಿ, ಸುಮಾರು ವರ್ಷಗಳಿಂದ ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚದ ಆಧಾರದಲ್ಲಿ ವೈಜ್ಞಾನಿಕ ಬೆಂಬಲ ಬೆಲೆ ನಿಗದಿ ಮಾಡಬೇಕು ಹಾಗೂ ಕನಿಷ್ಠ ಬೆಂಬಲ ಬೆಲೆ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ರೈತ ಸಂಘಟನೆಗಳು ಮನವಿ ಮಾಡುತ್ತಾ ಬಂದಿವೆ. ಆದರೂ, ಸರ್ಕಾರಗಳು ರೈತರ ಬೇಡಿಕೆಗಳನ್ನು ಈಡೇರಿಸಿಲ್ಲ ಎಂದು ಆರೋಪಿಸಿದರು.

ಕೋವಿಡ್ ಸಂದರ್ಭದಲ್ಲಿ ರೈತರು ಮತ್ತು ಜನರು ಸೇರದಿದ್ದ ಕಾರಣಕ್ಕೆ ಸರ್ಕಾರಗಳು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದವು. ಯಾವುದೇ ಕಾಯ್ದೆಗೆ ಬೇಕಾದರೆ ತಿದ್ದುಪಡಿ ತನ್ನಿ ರಾಷ್ಟ್ರೀಯ, ಅಂತರರಾಷ್ಟ್ರೀಯ ವರ್ತಕರಿಗೆ ಬೇಕಾದರೆ ಅವಕಾಶ ಮಾಡಿಕೊಡಿ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಕನಿಷ್ಠ ಬೆಂಬಲ ಬೆಲೆ ಕಾಯ್ದೆಗೆ ಮಾನ್ಯತೆ ನೀಡಿ ಬೆಲೆ ನಿಗದಿ ಮಾಡಬೇಕೆಂದು ಆಗ್ರಹಿಸಿದರು.

ಎಐಕೆಎಸ್‌ನ ಜಿಲ್ಲಾಧ್ಯಕ್ಷ ಹೆಚ್.ಜಿ. ಉಮೇಶ್, ನಿಟ್ಟುವಳ್ಳಿ ಅಂಜಿನಪ್ಪ, ಹೊನ್ನೂರು ಮುನಿಯಪ್ಪ, ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಐರಣಿ ಚಂದ್ರು, ಕೆ. ಬಾನಪ್ಪ, ಆವರಗೆರೆ ಹನುಮಂತಪ್ಪ, ನಾಗೇಂದ್ರಪ್ಪ, ಬಲ್ಲೂರು ರವಿಕುಮಾರ್, ಸಿದ್ದೇಶ್ ಆನೆಕಲ್ಲು, ಪ್ರಸಾದ್, ಶೇಖರನಾಯ್ಕ, ತಿಪ್ಪೇಸ್ವಾಮಿ, ಅನಿಲ್‌ಕುಮಾರ್, ಶಿವಕುಮಾರ್, ಚಂದ್ರು, ಹನುಮಂತಪ್ಪ, ಭೀಮಾರೆಡ್ಡಿ, ಬಸವರಾಜ ರಾಮಪುರ, ಪಾಲವ್ವನಹಳ್ಳಿ ಪ್ರಸನ್ನಕುಮಾರ್ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಇನ್ನೆರಡು ದಿನದಲ್ಲಿ ಕಾರ್ಯಪಡೆ ವರದಿ

**(1ನೇ ಪುಟದಿಂದ)** ಪಾಲ್ಗೊಂಡು ಮಾತನಾಡಿದ ಅವರು, ನಿವೃತ್ತ ಐಎಎಸ್ ಅಧಿಕಾರಿ ಎಸ್.ವಿ.ರಂಗನಾಥ್ ಅವರ ನೇತೃತ್ವದಲ್ಲಿ ಕಾರ್ಯಪಡೆಯನ್ನು ರಚಿಸ ಲಾಗಿದ್ದು, ಕಾರ್ಯಪಡೆಯು ಈಗಾಗಲೇ ಪ್ರಾಥಮಿಕ ಹಂತದ ಶಿಫಾರಸ್ಸುಗಳನ್ನು ಸಲ್ಲಿಸಿದೆ. ಅಂತಿಮ ಹಂತದ ಶಿಫಾರಸ್ಸು ಗಳನ್ನು ಈ ಶನಿವಾರ ಸಲ್ಲಿಸಲಿದೆ ಎಂದರು.

ಉಳಿದೆಲ್ಲ ರಾಜ್ಯಗಳಿಗಿಂತ ಮೊದಲೇ ಶಿಕ್ಷಣ ನೀತಿಯನ್ನು ಹಂತ ಹಂತವಾಗಿ ಜಾರಿ ಮಾಡುವುದು ಸರ್ಕಾರದ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಾದ ಎಲ್ಲ ಹೆಜ್ಜೆಗಳನ್ನು ಇಡಲಾಗುತ್ತಿದೆ. ಇರುವ ವಿಶ್ವವಿದ್ಯಾಲಯಗಳಲ್ಲಿಯೇ 6 ಸಂಶೋಧನಾ ಹಾಗೂ 10 ಬೋಧನಾ ವಿ.ವಿ.ಗಳನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದಂತೆ 34 ಶಿಕ್ಷಣ ಸಂಸ್ಥೆಗಳನ್ನು ಸ್ವಾಯತ್ತ ಶಿಕ್ಷಣ ಸಂಸ್ಥೆಗಳನ್ನಾಗಿ ರೂಪಿಸಲಾಗುವುದು. ಎಲ್ಲೆಡೆಯು ಬಹುವಿಷಯಗಳ ಕಲಿಕೆ ಮತ್ತು ಬೋಧನೆಗೆ ಒತ್ತಾಸೆ ನೀಡಲಾಗುತ್ತಿದೆ. ಇದರಿಂದ ಸಮಾಜದಲ್ಲಿರುವ ಸಾಮಾಜಿಕ, ಆರ್ಥಿಕ ಮತ್ತಿತರೆ ಎಲ್ಲ ಸಮಸ್ಯೆಗಳಿಗೆ ಚರಮಗೀತೆ ಹಾಡುವುದು ನಮ್ಮ ಉದ್ದೇಶವಾಗಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಈವರೆಗೂ ಪಠ್ಯೇತರ ಚಟುವಟಿಕೆಗೂ ಪಠ್ಯಕ್ಕೂ ಸಂಬಂಧವೇ ಇರುತ್ತಿರಲಿಲ್ಲ. ಇನ್ನು ಮುಂದೆ ಹಾಗಾಗುವುದಿಲ್ಲ. ಪಠ್ಯೇತರ ವಲಯದಲ್ಲಿದ್ದ ಕ್ರೀಡೆ, ಕಲೆ, ಸಂಗೀತ, ಮತ್ತಿತರೆ ವಿಷಯಗಳೂ ಪಠ್ಯದ ವ್ಯಾಪ್ತಿಗೇ ಬರುತ್ತವೆ. ಆಗ ಜ್ಞಾನಾರ್ಜನೆಯ ದಿಕ್ಕಿನಲ್ಲಿ ವಿದ್ಯಾರ್ಥಿಗಳಿಗೆ ಆಯ್ಕೆ ಹೆಚ್ಚಾಗುತ್ತದೆ. ಅದರಿಂದ ಬಹು ಆಯಾಮದ ಪ್ರತಿಭೆಗಳು ನಮ್ಮ ಶೈಕ್ಷಣಿಕ ವ್ಯವಸ್ಥೆಯಿಂದ ಹೊರಹೊಮ್ಮಲಿವೆ ಎಂದು ಡಿಸಿಎಂ ಹೇಳಿದರು.


ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರಾಜ್ಯಪಾಲ ವಜೂಭಾಯಿ ವಾಲಾ ಅವರು, ಸಮಾಜಕ್ಕೆ ಒಳ್ಳೆಯದಾಗುವ ಹಾಗೂ ಎಲ್ಲ ಹಂತಗಳಲ್ಲೂ ಜ್ಞಾನವನ್ನು ಹೆಚ್ಚಿಸುವ ಕೆಲಸ ಆಗಬೇಕಿದೆ. ಮುಖ್ಯವಾಗಿ ವಿದ್ಯಾರ್ಥಿಗಳು ಗಳಿಸಿದ ಜ್ಞಾನವನ್ನು ಸಮಾಜಕ್ಕೇ ಮೀಸಲಿಡಬೇಕು. ಈ ನಿಟ್ಟಿನಲ್ಲಿ ಬೋಧಕರ ಪಾತ್ರ ಅತಿ ದೊಡ್ಡದು ಎಂದರು.

# ದುಡಿಮೆ ಇರಲಿ, ಪಾರ್ಕಿಂಗ್ ಜವಾಬ್ದಾರಿ ಬೇಡ !

**(1ನೇ ಪುಟದಿಂದ)** ಸಮಸ್ಯೆಯಾಗಿದೆ ಹಾಗೂ ಕೆಲ ಎಂ. ಸ್ಯಾಂಡ್ ವಾಹನಗಳು ಹೆಚ್ಚಿನ ಲೋಡ್ ಹೊಂದಿದ್ದು ಹಾಗೂ ಅತಿ ವೇಗವಾಗಿ ಚಲಿಸುತ್ತಿವೆ. ಇದರಿಂದಾಗಿ ರಸ್ತೆ ಹಾಳಾಗುವುದರ ಜೊತೆಗೆ ಜನರ ಜೀವಕ್ಕೂ ಅಪಾಯವಾಗುತ್ತಿದೆ ಎಂಬ ಆಕ್ಷೇಪಗಳು ಸಭೆಯಲ್ಲಿ ಕೇಳಿ ಬಂದವು.


ಸಭೆಯಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸ್ಮಾರ್ಟ್ ಸಿಟಿ ಯೋಜನೆ ಅಧಿಕಾರಿ ರವೀಂದ್ರ ಮಲ್ಲಾಪುರ, ದೂಡಾ ಆಯುಕ್ತ ಕುಮಾರಸ್ವಾಮಿ, ಕೆಎಸ್ ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾಳ್, ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

**ಮಲೇಬೆನ್ನೂರು ಗುಲಾಮ್ ಹುಸೇನ್ ಸಾಬ್ ನಿಧನ**



ದಾವಣಗೆರೆ ಅಹ್ಮದ್ ನಗರ, 2ನೇ ಕ್ರಾಸ್ ವಾಸಿ ಮಲೇಬೆನ್ನೂರು ಗುಲಾಮ್ ಹುಸೇನ್ ಸಾಬ್ (85) ಅವರು ದಿನಾಂಕ 5.11 2020 ರಂದು ಗುರುವಾರ ಸಂಜೆ 4.30 ನಿಧನರಾಗಿದ್ದಾರೆ. ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6/11/2020ರ ಬೆಳಿಗ್ಗೆ 10:00 ಗಂಟೆಗೆ ಪಿ.ಬಿ. ರಸ್ತೆ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

**ಶ್ರೀಮತಿ ಪಾರ್ವತಮ್ಮ ನಿಧನ**



ದಾವಣಗೆರೆ ಹೊಸ ಬಸ್ ನಿಲ್ದಾಣದ ಹಿಂಭಾಗದ ಶ್ರೀ ಸಿದ್ದೇಶ್ವರ ಬಡಾವಣೆ ವಾಸಿ, ದಿ.ನಿಂಗಪ್ಪ ಇವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ (75) ಅವರು ದಿನಾಂಕ 5.11.2020 ರಂದು ಗುರುವಾರ ಮಧ್ಯಾಹ್ನ 2.25ಕ್ಕೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.11.2020 ರಂದು ಮಧ್ಯಾಹ್ನ 12 ಗಂಟೆಗೆ ನಗರದ ಬೂದಾಳ್ ರಸ್ತೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಸರ್ವಜ್ಞರ ಬದುಕು - ಬರಹ' ಕುರಿತು ಹಿರಿಯ ಸಂಶೋಧಕ ಡಾ. ಬುರುಡೇಕಟ್ಟೆ ಮಂಜಪ್ಪ ಮಾಹಿತಿ ನೀಡಲಿದ್ದಾರೆ.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

# ಅಖಿಲ ಭಾರತ ವೀರಶೈವ ಮಹಾಸಭಾದ ನಗರ ಘಟಕದ ಅಧ್ಯಕ್ಷರಾಗಿ ಪುಷ್ಪ ವಾಲಿ



ದಾವಣಗೆರೆ, ನ.5- ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ನಗರ ಮಹಿಳಾ ಘಟಕದ ಅಧ್ಯಕ್ಷರಾಗಿ ಪುಷ್ಪಾ ವೀರೇಶ್ ವಾಲಿ ಆಯ್ಕೆಯಾಗಿದ್ದಾರೆ.

ವೀರಶೈವ ಮಹಾಸಭಾ ನಗರ ಘಟಕದ ಸಮಿತಿಯ ಸದಸ್ಯರನ್ನು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ ಅವರ ಆದೇಶದ ಮೇರೆಗೆ ಜಿಲ್ಲಾ ಮಹಾಸಭಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಶ್ರೀಮತಿ ಉಮಾ ರಮೇಶ್ ಸೂಚನೆ ಮೇರೆಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಪ್ರಧಾನ ಕಾರ್ಯದರ್ಶಿಯಾಗಿ ಮಂಗಳ ಕರಿಬಸಪ್ಪ, ಉಪಾಧ್ಯಕ್ಷರಾಗಿ ಸುಮಾ ಮಲ್ಲಿಕಾರ್ಜುನಯ್ಯ, ಮಂಜುಳ ಮಹೇಶ್, ರೂಪ ಶಿವಕುಮಾರ್, ಸುನಂದ ನಾಗರಾಜ್ ಅವರುಗಳು ನೇಮಕಗೊಂಡಿದ್ದಾರೆ.

ಕೋಶಾಧ್ಯಕ್ಷರಾಗಿ ಮಂಜುಳಾ ಇಟಗಿ, ಕಾರ್ಯದರ್ಶಿಗಳಾಗಿ ಶಕುಂತಲಾ ಬಸವರಾಜಪ್ಪ ಕೆ, ಜ್ಯೋತಿ ಎಚ್, ಚೈತ್ರ ಬಸವರಾಜ್, ಸುನಿತಾ ಎ. ಶಿವಾನಂದಪ್ಪ ಅವರುಗಳು ನೇಮಕವಾಗಿದ್ದಾರೆ.


ಅನ್ನಪೂರ್ಣ ಬಸವರಾಜ್, ಸುಜಾತ ವೀರಣ್ಣ, ಮಂಜುಳ ಗದ್ದುಗೇಶ್, ಶಿಲ್ಪ ಎ. ಮೃತ್ಯುಂಜಯ, ಗಂಗಾ, ವಸಂತ ವೀರೇಶ್, ಲತಾ ಜಿ. ಸೋಗಿ, ಅಂಬಿಕಾ ಎಸ್.ಎಸ್, ಆರತಿ, ವಾಣಿ ಎಂ.ಬಿ, ರೂಪ ಮರೀಗೌಡ್ರು, ವನಿತಾ ಎಂ, ನಂದಿನಿ ಬಿ.ಎಸ್, ರೇಣುಕಾ ಶಿವಯೋಗಿ, ಶೋಭ ಬಸವರಾಜಪ್ಪ, ಸುಜಾತ, ಕವಿತ, ನೇತ್ರ ಬಸವರಾಜ್, ಕೊಟ್ರಮ್ಮ ಬಿ, ಸರ್ವಮಂಗಳ, ಉಮಾ ಕೊಟ್ರಗೌಡ್ರು, ಗಿರಿಜಾ ನಾಗರಾಜ್ ಪಾಟೀಲ್, ಪುಷ್ಪಾ ನಾಗೇಂದ್ರಪ್ಪ, ಮಂಜುಳ ಮಹಾಂತೇಶ, ದಾಕ್ಷಾಯಣಿ ಟಿ, ಸುಶೀಲಮ್ಮ, ಸಾವಿತ್ರ ಸಿದ್ದಪ್ಪ, ಮಂಜಮ್ಮ ಮಾಂತೇಶ್, ಪುಷ್ಪಾ ವೀರಯ್ಯ ಅವರುಗಳು ಸದಸ್ಯರುಗಳಾದಿ

## ವಿ.ವಿ. ಆರಂಭಕ್ಕೆ ಮಾರ್ಗಸೂಚಿ

**(1ನೇ ಪುಟದಿಂದ)** ರಾಜ್ಯಗಳೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಿವೆ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

# ಆರೋಗ್ಯ ಸಂಸ್ಥೆಗಳ ಮಾಹಿತಿ ಶೀಘ್ರ ಸಲ್ಲಿಕೆಗೆ ಡಿಸಿ ಸೂಚನೆ

## ಕೋವಿಡ್ ಲಸಿಕೆ ಜಿಲ್ಲಾ ಟಾಸ್ಕ್‌ಫೋರ್ಸ್ ಸಭೆ



ದಾವಣಗೆರೆ, ನ.5- ಮುಂಬರುವ ಕೋವಿಡ್-19 ಲಸಿಕಾ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಮೊದಲ ಆದ್ಯತೆಯಲ್ಲಿ ಆರೋಗ್ಯ ಸಿಬ್ಬಂದಿಗಳಿಗೆ ಲಸಿಕೆ ನೀಡಲು ಸರ್ಕಾರ ಸೂಚಿಸಿರುವುದರನ್ವಯ ಜಿಲ್ಲೆಯಲ್ಲಿರುವ ಎಲ್ಲಾ ಕ್ಲಿನಿಕ್, ನರ್ಸಿಂಗ್ ಹೋಂ, ನರ್ಸಿಂಗ್ ಕಾಲೇಜು, ಪ್ಯಾರಾ ಮೆಡಿಕಲ್, ಲ್ಯಾಬ್‌ಗಳಿಂದ ಸಿಬ್ಬಂದಿಗಳ ವಿವರವನ್ನು ನಿಗದಿತ ನಮೂನೆಯಲ್ಲಿ ಶೀಘ್ರದಲ್ಲಿ ಪಡೆದು ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದರು.

ಕೇಂದ್ರ ಸರ್ಕಾರದ ನಿರ್ದೇಶನದಂತೆ ಮೊದಲ ಆದ್ಯತೆಯಲ್ಲಿ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಲಸಿಕೆ ನೀಡುವ ಸಂಬಂಧ ಆರೋಗ್ಯ ಸಂಸ್ಥೆಗಳು ಮತ್ತು ಸಿಬ್ಬಂದಿಗಳ ಮಾಹಿತಿ ಪಡೆಯುವ ಕುರಿತು ಪರಿಶೀಲಿಸಲು ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾಗಿದ್ದ ಜಿಲ್ಲಾ ಟಾಸ್ಕ್‌ಫೋರ್ಸ್ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕೆಪಿಎಂಇ ಕಾಯ್ದೆಯಡಿ ಒಟ್ಟು 740 ಆರೋಗ್ಯ ಸಂಸ್ಥೆಗಳು ನೋಂದಣಿ ಮಾಡಿಸಿಕೊಂಡಿದ್ದು, ಪ್ರಸ್ತುತ 560 ಸಕ್ರಿಯ ಸಂಸ್ಥೆಗಳಿವೆ. ಈಗಾಗಲೇ 422 ಸಂಸ್ಥೆಗಳ ವಿವರ ಪಡೆದು ದೃಢೀಕರಣ (ವ್ಯಾಲಿಡೇಷನ್) ಕಾರ್ಯ ಪ್ರಗತಿಯಲ್ಲಿದೆ. ಇನ್ನುಳಿದ 110 ಲ್ಯಾಬ್ ಮತ್ತು ಸ್ಕ್ಯಾನಿಂಗ್ ಕೇಂದ್ರಗಳ ಮಾಹಿತಿಯನ್ನು ಇನ್ನೊಂದೆರಡು ದಿನಗಳಲ್ಲಿ ಆರ್‌ಸಿಹೆಚ್‌ಓ ಹಾಗೂ ಅವರು ನಿಗದಿಪಡಿಸಿರುವ ತಂಡಗಳು ಕಲೆ ಹಾಕಿ ನಿಗದಿತ ಟೆಂಪ್ಲೇಟ್‌ನಲ್ಲಿ ಅಪ್‌ಡೇಟ್ ಮಾಡಬೇಕು. ಇದಕ್ಕೆ ಅಗತ್ಯವಾದ ಪೂರ್ವ ತಯಾರಿ ಮಾಡಿಕೊಂಡು ಈ ಕಾರ್ಯ ಪೂರ್ಣಗೊಳಿಸಬೇಕು. ನಂತರ ಸಿಬ್ಬಂದಿಗಳ ವಿವರನ್ನು ನೀಡಬೇಕೆಂದರು.

ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮಾತನಾಡಿ, ಆರೋಗ್ಯ ಸಂಸ್ಥೆಗಳ ಮಾಹಿತಿ ಕಲೆ ಹಾಕಲು 5 ತಂಡಗಳನ್ನು ನೇಮಿಸಿದ್ದು, ಪ್ರತಿದಿನ ಈ ತಂಡಗಳು ಸಂಸ್ಥೆಗಳಿಗೆ ಭೇಟಿ ನೀಡಿ, ಸಂಸ್ಥೆಯ ಮತ್ತು ಸಿಬ್ಬಂದಿ ವಿವರ ಪಡೆಯುತ್ತಿದ್ದಾರೆ. ಅನೇಕ ಆಸ್ಪತ್ರೆ, ಸಂಸ್ಥೆಗಳು ಬಂದ್ ಆಗಿದ್ದು, ಇವುಗಳ ಮಾಹಿತಿಯನ್ನೂ ಪಡೆಯಲಾಗುತ್ತಿದೆ ಹಾಗೂ ಲಸಿಕೆಯನ್ನು ನೀಡುವ ನುರಿತ ಸಿಬ್ಬಂದಿಗಳ ವಿವರವನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ತರಬೇತಿ ಹೊಂದಿದ ಲಸಿಕಾಕಾರರು ಹಾಗೂ ಲಸಿಕಾ ಕಾರ್ಯಕ್ರಮಕ್ಕೆ ಪೂರಕವಾದ ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ಜಿಲ್ಲೆಯಲ್ಲಿ ಹೊಂದಲಾಗಿದೆ ಎಂದರು.

**ಕೋವಿಡ್ ಪರೀಕ್ಷೆ ಹೆಚ್ಚಿಸಿ :** ಎಲ್ಲಾ ತಾಲ್ಲೂಕುಗಳಲ್ಲಿ ಕೋವಿಡ್ ಪರೀಕ್ಷೆಯ ಸಂಖ್ಯೆಯನ್ನು ಹೆಚ್ಚಿಸಬೇಕು. ಬಟ್ಟೆ ಅಂಗಡಿಗಳು, ಬಂಗಾರದ ಅಂಗಡಿಗಳು, ಹೋಟೆಲ್‌ಗಳು ಹೀಗೆ ಜನ ನಿಬಿಡ ಸ್ಥಳಗಳಲ್ಲಿ ಕೋವಿಡ್ ಪರೀಕ್ಷೆಯನ್ನು ಮಾಡಬೇಕು. ಸಾರ್ವಜನಿಕರು ಸಹ ಸಹಕರಿಸಬೇಕು. ಅಸಹಕಾರ ತೋರಿದರೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಅಂತಹವರ ವಿರುದ್ದ ಅಧಿಕಾರಿಗಳು ಕ್ರಮ ಕೈಗೊಳ್ಳಬಹುದಾಗಿದ್ದು, ನಿಗದಿತ ಗುರಿಗಿಂತ ತಾಲ್ಲೂಕು ಸೇರಿದಂತೆ ಜಿಲ್ಲೆಯಾದ್ಯಂತ ಕೋವಿಡ್ ಪರೀಕ್ಷೆಯನ್ನು ಹೆಚ್ಚಿಸಬೇಕು. ಚಳಿಗಾಲದಲ್ಲಿ ಕೋವಿಡ್ ಸೋಂಕು ಹೆಚ್ಚಾಗುವ ಸಂಭವವಿದ್ದು, ಎಲ್ಲರೂ ಜಾಗೃತೆಯಿಂದಿರಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರ, ಮತ್ತಿತರೆ ಮುನ್ನೆಚ್ಚರಿಕಾ ಕ್ರಮ ವಹಿಸಬೇಕೆಂದರು.

ಪ್ರಸ್ತುತ ಜಿಲ್ಲೆಗೆ ಪ್ರತಿದಿನ 2200 ಕೊರೊನಾ ಪರೀಕ್ಷೆಯ ಗುರಿ ನೀಡಲಾಗಿದ್ದು, 2500 ರಿಂದ 2800 ರವರೆಗೆ ಪರೀಕ್ಷೆ ನಡೆಸುವಂತೆ ಡಿಹೆಚ್‌ಓ ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳಿಗೆ ಸೂಚಿಸಿದ ಅವರು ಐಸಿಎಂಆರ್ ಪೋರ್ಟಲ್‌ನಲ್ಲಿ ಈ ಕುರಿತು ಡಾಟಾ ಎಂಟ್ರಿ ಮಾಡುವುದೂ ಮುಖ್ಯ ಎಂದರು.

ಜಿಲ್ಲಾ ಪಂಚಾಯತ್ ಸಿಇಓ ಪದ್ಮ ಬಸವಂತಪ್ಪ ಮಾತನಾಡಿ, ಕೊರೊನಾ ಪರೀಕ್ಷೆ ಸಂಬಂಧ ಆರೋಗ್ಯಾಧಿಕಾರಿಗಳು ತಾಲ್ಲೂಕು ಇಓ ಗಳಿಗೆ ಮಾಹಿತಿ ನೀಡಬೇಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವಾರು ಗುರಿ ನಿಗದಿಪಡಿಸಬೇಕು ಎಂದರು.

ಇದೇ ವೇಳೆ 'ಅನಿಮೀಯತೆ ಮುಕ್ತ ಭಾರತ' ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ, ಸಿಇಓ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಇದಕ್ಕೆ ಸಂಬಂಧಿಸಿದ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿದರು.

ಸಭೆಯಲ್ಲಿ ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಶಸ್ತ್ರಚಿಕಿತ್ಸಕ ಜಯಪ್ರಕಾಶ್, ಡಿಎಸ್‌ಓ ಡಾ.ರಾಘವನ್, ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ನಟರಾಜ್, ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಕಾರಾಧ್ಯ, ಡಿಎಲ್‌ಓ ಡಾ.ಮುರಳೀಧರ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ವಿಜಯಕುಮಾರ್, ತಾಲ್ಲೂಕು ವೈದ್ಯಾಧಿಕಾರಿಗಳು, ಇತರೆ ಅಧಿಕಾರಿಗಳು ಇದ್ದರು.

# ಮಸೂದೆಗಳನ್ನು ಹಿಂಪಡೆಯಲು ರೈತರ ಒತ್ತಾಯ




ಹರಪನಹಳ್ಳಿ, ನ.5- ಕೃಷಿ ಪ್ರಧಾನ ಬಹುಸಂಖ್ಯಾತ ರೈತರಿಗೆ ಮಾರಕವಾದ ಭೂಸುಧಾರಣೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆ, ಕಾರ್ಮಿಕ ವಿರೋಧಿ ಕಾಯ್ದೆ ತಿದ್ದುಪಡಿಗಳು ಸೇರಿದಂತೆ, ವಿವಿಧ ಜನ ವಿರೋಧಿ ಕಾನೂನು ತಿದ್ದುಪಡಿ ಮಸೂದೆಗಳನ್ನು ಸುಗ್ರೀವಾಜ್ಞೆಗಳ ಮೂಲಕ ಜಾರಿಗೆ ತರಲು ಹೊರಟಿರುವ ಮಸೂದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ, ಎ.ಐ.ಕೆ. ಎಸ್.ಸಿ.ಸಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಎ.ಐ.ಕೆ.ಎಸ್. ತಾಲ್ಲೂಕು ಅಧ್ಯಕ್ಷ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಕೇಂದ್ರ ಸರ್ಕಾರ ಜನತೆಯ ವಿರೋಧವನ್ನು ಲೆಕ್ಕಿಸಿದೇ ಕೃಷಿ ಕ್ಷೇತ್ರವನ್ನು ಖಾಸಗಿ ಕಾರ್ಪೋರೇಟ್ ಕಂಪನಿಗಳು ಪರಭಾರೆ ಮಾಡಲು ಹೊರಟಿರುವುದು ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿದಂತಾಗಿದೆ. ಇದರಿಂದ ಕೃಷಿ ಪ್ರಧಾನ ದೇಶದ ಬಹುಸಂಖ್ಯಾತ ರೈತರಿಗೆ ಮಾರಕ ಮರಣ ಶಾಸನಗಳು ಎದುರು ಆಗಿವೆ. ಕೂಡಲೇ ಜನವಿರೋಧಿ ತಿದ್ದುಪಡಿ ಮಸೂದೆಗಳನ್ನು ಹಿಂಪಡೆಯ ಬೇಕು ಎಂದು ಆಗ್ರಹಿಸಿದರು.

ಅತಿ ಹೆಚ್ಚು ಬೆಳೆ ಬೆಳೆದಿರುವ ಮೆಕ್ಕೆಜೋಳಕ್ಕೆ ಕ್ವಿಂಟಾಲ್‌ಗೆ ಕನಿಷ್ಠ ರೂ: 2,000 ಬೆಂಬಲ ಬೆಲೆ ಘೋಷಿಸಬೇಕು. ಕೋವಿಡ್-19 ಸಂಕಷ್ಟದಲ್ಲಿ ಸಿಲುಕಿ ಕೃಷಿ ಬಿಕ್ಕಟ್ಟಿನಿಂದ ಅಪಾರ ನಷ್ಟ ಎದುರು ಆಗಿದೆ. ಕೂಡಲೇ ನಷ್ಟ ಪ್ಯಾಕೇಜ್ ಘೋಷಿಸ ಬೇಕು. ಫಸಲ್ ಬಿಮಾ ಬೆಳೆ ವಿಮೆ ರೈತರಿಗೆ ನೀಡದೆ ಮೋಸ ವಂಚನೆ ಮಾಡಿರುವ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ದೇಶದಲ್ಲಿ ಸಮರ್ಪಕವಾಗಿ ಅತಿವೃಷ್ಟಿ, ಅನಾವೃಷ್ಟಿಗಳಿಂದ ರೈತರನ್ನು ರಕ್ಷಿಸಬೇಕು, ಡಾ॥ ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ಕರಡಿದುರ್ಗ ಚೌಡಪ್ಪ ಮಾತನಾಡಿ, ನರೇಗಾ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ವರ್ಷದಲ್ಲಿ ಕನಿಷ್ಠ 200 ದಿನಗಳವರೆಗೆ ಕೆಲಸ ನೀಡಿ ರೂ. 600 ಕನಿಷ್ಠ ವೇತನ ಜಾರಿಗೊಳಿಸಬೇಕು. ತಾಲ್ಲೂಕಿನಲ್ಲಿ ಮಹತ್ತರ ನೀರಾವರಿ ಯೋಜನೆಯಾದ ಗರ್ಭಗುಡಿ ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಯನ್ನು ಗುಣಮಟ್ಟ ಹಾಗೂ ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಅಲ್ಲದೆ ರಸ್ತೆ ದುರಸ್ತೀಕರಣ ಹಾಗೂ ಗುಣಮಟ್ಟ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲಿ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರುಗಳಾದ ಕೆ.ಕಲ್ಲಹಳ್ಳಿ ಗೋಣೆಪ್ಪ, ಗೌರಿಹಳ್ಳಿ ಹನುಮಂತಪ್ಪ, ಸತ್ತೂರು ಮಹಾದೇವಪ್ಪ, ಡಿ.ಎಸ್.ಎಸ್ ಮುಖಂಡರಾದ ಕಬ್ಬಳ್ಳಿ ಮೈಲಪ್ಪ, ಪುಣಬಘಟ್ಟೆ ಮಂಜಪ್ಪ, ಸಿ.ಪಿ.ಐ.ಎಂ.ಎಲ್.ನ ಸಂದೇರ ಪರಶುರಾಮ, ಎ.ಐ.ವೈ.ಎಫ್ ರಾಜ್ಯ ಕಾರ್ಯದರ್ಶಿ ಹೆಚ್.ಎಂ.ಸಂತೋಷ, ಎ.ಐ.ಎಸ್.ಎಫ್ ರಾಜ್ಯ ಕಾರ್ಯದರ್ಶಿ ರಮೇಶ್‌ನಾಯ್ಕ, ಸಹ ಕಾರ್ಯದರ್ಶಿಗಳಾದ ಮಾದಿಹಳ್ಳಿ ಮಂಜಪ್ಪ, ಕೊಟ್ರೇಶ್ ಬಳಿಗನೂರು, ಉಪಾಧ್ಯಕ್ಷ ಚಂದ್ರನಾಯ್ಕ, ಎ.ಐ.ವೈ.ಎಫ್. ತಾಲ್ಲೂಕು ಉಪಾಧ್ಯಕ್ಷ ಮುಜೀಬ್ ರಹಿಮಾನ್, ತೌಡೂರು ಕೊಟ್ರಯ್ಯ ಹಾಗು ಇತರರು ಭಾಗವಹಿಸಿದ್ದರು.

# ಪತ್ರಕರ್ತ ಅನರ್ಬ್ ಗೋಸ್ವಾಮಿ ಬಂಧನ : ಜಿಲ್ಲಾ ಬಿಜೆಪಿ ಪ್ರತಿಭಟನೆ



ದಾವಣಗೆರೆ, ನ.5- ನಗರದ ಜಯದೇವ ವೃತ್ತದಲ್ಲಿ ರಾಷ್ಟ್ರವಾದಿ ಪತ್ರಕರ್ತ ಅನರ್ಬ್ ಗೋಸ್ವಾಮಿಯವರನ್ನು ಅಸಂವಿಧಾನಿಕವಾಗಿ ಬಂಧಿಸಿರುವ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಬಿಜೆಪಿ ಜಿಲ್ಲಾ ಯುವ ಮೋರ್ಚಾ ವತಿಯಿಂದ ಅಧ್ಯಕ್ಷ ಆರ್.ಎಲ್.ಶಿವಪ್ರಕಾಶ್ ನೇತೃತ್ವದಲ್ಲಿ ಉದ್ಧವ್ ಠಾಕ್ರೆ ಅವರ ಪ್ರತಿಕೃತಿ ದಹಿಸುವ ಮೂಲಕ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ. ವೀರೇಶ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಪಾಲಿಕೆ ಸದಸ್ಯರಾದ ಶಿವನಗೌಡ ಪಾಟೀಲ್, ತರಕಾರಿ ಶಿವು, ಜಿಲ್ಲಾ ಯುವ ಮೊರ್ಚಾ ಪದಾಧಿಕಾರಿಗಳಾದ ಶ್ರೀಕಾಂತ್ ನೀಲಗುಂದ, ಶಶಿಧರ್, ಕಿರಣ್, ಗುರು, ಕೆ.ವಿ.ಪ್ರಶಾಂತ್, ಕೆ.ಬಿ.ನರೇಂದ್ರ, ಜಿ.ಎಸ್.ಗಂಗಾಧರ್, ಉತ್ತರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಪದಾಧಿಕಾರಿಗಳಾದ ಶಿವು, ಅರುಣ್ ಕೋಟೆ, ಹರೀಶ್ ಶಾಮನೂರು, ವಿವೇಕ್, ಅನಿಲ್, ರೇಣುಕಾ ಪ್ರಸನ್ನ, ರಾಜೇಶ್, ಕಿಶೋರ್, ರಘು, ಗಣೇಶ್ ಹಾಗೂ ದಾವಣಗೆರೆಯ ನಾಗರಿಕ ವೇದಿಕೆಯ ಪದಾಧಿಕಾರಿಗಳು, ಸೈನಿಕರ ಸಂಘದ ಅಧ್ಯಕ್ಷ ಸತ್ಯಪ್ರಕಾಶ್ ಹಾಗೂ ಪದಾಧಿಕಾರಿಗಳು, ದಕ್ಷಿಣ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಭಜರಂಗಿ, ಪದಾಧಿಕಾರಿಗಳಾದ ಅಭಿಷೇಕ್, ಕಿರಣ್, ಗಣೇಶ್, ನ್ಯಾಷನಲಿಸ್ಟ್ ಮಹಿಳಾ ಸಮಾಜದ ಪದಾಧಿಕಾರಿಗಳಾದ ಮಮತಾ, ವಿಜಯಲಕ್ಷ್ಮಿ ಹಾಗೂ ಇತರೆ ಪದಾಧಿಕಾರಿಗಳು, ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

## 32 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ

**(1ನೇ ಪುಟದಿಂದ)** ಸೌಕರ್ಯಗಳನ್ನು ಒದಗಿಸು ವುದಾಗಿ ತಿಳಿಸಿದರು. ಈ ಬಾರಿ ಉತ್ತಮ ಮಳೆಯಾಗಿರುವ ಕಾರಣ ಮುಂಗಾರಿನಂತೆ ಹಿಂಗಾರಿನಲ್ಲಿಯೂ ಕೂಡ ಹೆಚ್ಚಿನ ಬಿತ್ತನೆಯಾಗುವ ನಿರೀಕ್ಷೆಯಿದೆ. ಹೀಗಾಗಿ ಹಿಂಗಾರು ಬಿತ್ತನೆಗೆ ಬೇಕಾದ ರಸಗೊಬ್ಬರ, ಯೂರಿಯಾ ಸೇರಿದಂತೆ ಅಗತ್ಯ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ ಎಂದರು.

ಹಿಂಗಾರು ಹಂಗಾಮಿನಲ್ಲಿ 32.00 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ ಈಗಾಗಲೇ 11.19 ಲಕ್ಷ ಹೆಕ್ಟೇರ್ ಅಂದರೆ ಶೇ.35ರಷ್ಟು ವಿಸ್ತೀರ್ಣದಲ್ಲಿ ಬಿತ್ತನೆಯಾಗಿದೆ. ಜೋಳ ಮತ್ತು ಕಡಲೆ ಹಿಂಗಾರಿನ ಪ್ರಮುಖ ಬೆಳೆಗಳಾಗಿದ್ದು, ಕಳೆದ ಅಕ್ಟೋಬರ್ 29 ರವರೆಗೆ ದ್ವಿದಳ ಧಾನ್ಯಗಳು 14.28 ಲಕ್ಷ ಹೆಕ್ಟೇರ್ ಗುರಿಯಲ್ಲಿ 5.94 ಲಕ್ಷ ಹೆಕ್ಟೇರ್ ಸಾಧನೆಯಾಗಿದೆ. ಒಟ್ಟು ಆಹಾರ ಧಾನ್ಯಗಳ 27.54 ಲಕ್ಷ ಹೆಕ್ಟೇರ್ ಪೈಕಿ 9.73 ರಷ್ಟು ಸಾಧನೆಯಾಗಿದ್ದು, 26.02 ಲಕ್ಷ ಟನ್ ಉತ್ಪಾದನೆಯಾಗಿದೆ. ಇನ್ನು 3.53 ರಷ್ಟು ಎಣ್ಣೆಕಾಳುಗಳ ಗುರಿಯಿದ್ದು, ಈ ಪೈಕಿ 0.89 ಲಕ್ಷ ಹೆಕ್ಟೇರ್ ಸಾಧನೆಯಾಗಿ 2.81 ಲಕ್ಷ ಟನ್ ಉತ್ಪಾದನೆ, 0.48 ಲಕ್ಷ ಹೆಕ್ಟೇರ್ ಹತ್ತಿ ಗುರಿಯಿದ್ದು, ಇದರಲ್ಲಿ 0.08 ಲಕ್ಷ ಹೆಕ್ಟೇರ್ ಸಾಧನೆ, 0.98 ಲಕ್ಷ ಟನ್ ಉತ್ಪಾದನೆ ಹಾಗೂ 0.43 ರಷ್ಟು ಕಬ್ಬು ಗುರಿಯಲ್ಲಿ 0.49 ರಷ್ಟು ಸಾಧನೆಯಾಗಿದೆ.

ರೈತರಿಗೆ ಪ್ರಮುಖ ಕೃಷಿ ಸಾಮಗ್ರಿಗಳಾದ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ಸರಬರಾಜು ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಹಿಂಗಾರು ಹಂಗಾಮಿನಲ್ಲಿ ಪ್ರಮಾಣಿತ ಬಿತ್ತನೆ ಬೀಜದ ಅಂದಾಜು ಬೇಡಿಕೆ 3.28 ಲಕ್ಷ ಕ್ವಿಂಟಾಲ್ ಗಳಷ್ಟಿದ್ದು, ಇದುವರೆಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ 1,55,989.29 ಕ್ವಿಂ.ಗಳಷ್ಟು ಬಿತ್ತನೆ ಬೀಜ ವಿತರಣೆ ಮಾಡಲಾಗಿದೆ.ಹಂಗಾಮಿನಲ್ಲಿ 2.93 ಲಕ್ಷ ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ರಸಗೊಬ್ಬರಗಳ ಬೇಡಿಕೆ ಅಂದಾಜಿಸಿ ಸಕಾಲದಲ್ಲಿ ಪೂರೈಕೆಗಾಗಿ ಜಿಲ್ಲಾವಾರು, ಮಾಹೆವಾರು ಮತ್ತು ಸಂಸ್ಥೆವಾರು ಸರಬರಾಜು ಮಾಡುವ ಸಿದ್ದತೆ ಮಾಡಲಾಗಿದೆ. ಅಕ್ಟೋಬರ್ 1 ರಿಂದ 31 ರವರೆಗೆ ಹಿಂಗಾರಿಗೆ 9.39 ಲಕ್ಷ ಮೆಟ್ರಿಕ್ ಟನ್ ವಿವಿಧ ರಸಗೊಬ್ಬರ ಸರಬರಾಜು ಹಾಗೂ 9.62 ಲಕ್ಷ ಟನ್ ದಾಸ್ತಾನು ಇರುತ್ತದೆ.

## ಮಾಜಿ ಸಚಿವ ಕುಲಕರ್ಣಿ ಬಂಧನ

**(1ನೇ ಪುಟದಿಂದ)** ಹುಬ್ಬಳ್ಳಿ - ಧಾರವಾಡದ ಮಾಜಿ ಪೊಲೀಸ್ ಆಯುಕ್ತ ಪಾಂಡುರಂಗ ರಾಣೆ ಹಾಗೂ ಇನ್ನಿಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಸಿಬಿಐ ವಿಚಾರಣೆಗೆ ಒಳಪಡಿಸಿತ್ತು.

ಮಂಗಳೂರಿನಲ್ಲಿ ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿನಯ್ ಕುಲಕರ್ಣಿ ಅಪರಾಧಿ ಸ್ಥಾನದಲ್ಲಿದ್ದಾರೆ. ಈ ಕಾರಣದಿಂದ ಅವರನ್ನು ಸಿಬಿಐ ವಶಕ್ಕೆ ಪಡೆದಿದೆ. ಯೋಗೇಶ್ ಗೌಡ ಕುಟುಂಬಕ್ಕೆ ನ್ಯಾಯ ಸಿಗಬೇಕು ಎಂಬುದು ಎಲ್ಲರ ಅಪೇಕ್ಷೆಯಾಗಿತ್ತು, ಸದ್ಯ ಸಿಬಿಐಗೆ ಸಾಕ್ಷ್ಯಾಧಾರ ಸಿಕ್ಕಿರುವುದರಿಂದ ವಿನಯ್ ಕುಲಕರ್ಣಿಯನ್ನು ವಶಕ್ಕೆ ಪಡೆದಿದೆ ಎಂದಿದ್ದಾರೆ.

ಈಗಲಾದರೂ ನ್ಯಾಯ ಸಿಗಲಿ ಎಂಬುದೇ ನಮ್ಮ ಅಭಿಪ್ರಾಯ ಎಂದಿರುವ ಅವರು, ವಿನಯ್ ಕುಲಕರ್ಣಿ ಬಿಜೆಪಿಗೆ ಸೇರುತ್ತಾರೆ ಎಂಬ ಸುದ್ದಿ ಶುದ್ಧ ಸುಳ್ಳು ಎಂದು ಇದೇ ಸಂದರ್ಭದಲ್ಲಿ ತಳ್ಳಿ ಹಾಕಿದ್ದಾರೆ.

ಇದೊಂದು ಸಿಬಿಐನ ಕಾನೂನಾತ್ಮಕ ನಿರ್ಧಾರ ಎಂದಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ತನಿಖೆ ಪರಿಶೀಲನೆ ಬಳಿಕ ಸಿಬಿಐ ಕಾನೂನು ಕ್ರಮ ಕೈಗೊಂಡಿದೆ ಎಂದಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಕ್ತಿನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಹರಡುವಿಕೆಯಲ್ಲಿ ದಾವಣಗೆರೆ ಮುಂಚೂಣಿ

**(1ನೇ ಪುಟದಿಂದ)** ಹಾಕಿದರೆ, ದಾವಣಗೆರೆ ಜಿಲ್ಲೆಯಲ್ಲಿ 7.6 ಲಕ್ಷ ಜನರು ಸಕ್ರಿಯ ಸೋಂಕಿತರಿದ್ದಾರೆ ಇಲ್ಲವೇ ಸೋಂಕಿಗೆ ಒಳಗಾಗಿದ್ದಾರೆ ಎಂಬ ಅಂದಾಜು ಸಿಗುತ್ತದೆ.

ಕಳೆದ ಸೆಪ್ಟೆಂಬರ್ 3ರಿಂದ ಸೆಪ್ಟೆಂಬರ್ 16ರ ನಡುವೆ ಕೊರೊನಾ ಸೋಂಕಿನ ಹರಡುವಿಕೆ ಅಂದಾಜು ಮಾಡಲು ಮೊದಲ ಸುತ್ತಿನ ಸಮೀಕ್ಷೆ ನಡೆಸಲಾಗಿತ್ತು. ಇತ್ತೀಚೆಗೆ ಕೊರೊನಾದಿಂದ ಗುಣಮುಖರಾದವರು ಹಾಗೂ ಪ್ರಸ್ತುತ ಸಕ್ರಿಯವಾಗಿ ಸೋಂಕು ಹೊಂದಿದವರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ರಾಜ್ಯದ 30 ಜಿಲ್ಲೆಗಳು ಹಾಗೂ ಬಿಬಿಎಂಪಿಯ 8 ವಲಯಗಳಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಜನಸಮೂಹದಲ್ಲಿ ಸಮೀಕ್ಷೆ ನಡೆಸಲಾಗಿತ್ತು.

ರ್‍ಯಾಪಿಡ್ ಆಂಟಿಜನ್ ಟೆಸ್ಟ್, ಆರ್.ಟಿ. - ಪಿಸಿಆರ್ ಹಾಗೂ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ತಿಳಿಯಲು ಸೀರಂ ಮಾದರಿಯಲ್ಲಿ ಐಜಿಜಿ ಆಂಟಿಬಾಡಿಗಳನ್ನೂ ಸಹ ಪರೀಕ್ಷಿಸಲಾಗಿತ್ತು.

ರಾಜ್ಯದಲ್ಲಿ ಒಟ್ಟು 16,585 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಇವರಲ್ಲಿ 15,624 ವ್ಯಕ್ತಿಗಳ ಫಲಿತಾಂಶವನ್ನು ವಿಶ್ಲೇಷಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ 412 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಇವರ ಪೈಕಿ ಶೇ.40.6ರಷ್ಟು ಜನರಲ್ಲಿ ಕೊರೊನಾ ಇರುವುದಾಗಿ ಸಮೀಕ್ಷೆ ತಿಳಿಸಿದೆ.

## ಆಂಧ್ರದ 262 ವಿದ್ಯಾರ್ಥಿಗಳಿಗೆ ಕೊರೊನಾ

**(1ನೇ ಪುಟದಿಂದ)** 262 ವಿದ್ಯಾರ್ಥಿಗಳಿಗೆ ಸೋಂಕು ಬಂದಿದೆ. ಇದು ಶೇ.0.1ರಷ್ಟೂ ಸಹ ಅಲ್ಲ. ಅವರು ಶಾಲೆಗೆ ಬಂದ ಕಾರಣದಿಂದಾಗಿ ಸೋಂಕು ಬಂದಿದೆ ಎಂಬುದು ಸರಿಯಲ್ಲ. ಪ್ರತಿ ಕೋಣೆಯಲ್ಲಿ 15 ಇಲ್ಲವೇ 16 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ ಎಂದವರು ತಿಳಿಸಿದ್ದಾರೆ.

ರಾಜ್ಯದಲ್ಲಿ 9 ಹಾಗೂ 10ನೇ ತರಗತಿಯ 9.75 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ 3.93 ಲಕ್ಷ ವಿದ್ಯಾರ್ಥಿಗಳು ಮಾತ್ರ ಶಾಲೆಗೆ ಬಂದಿದ್ದಾರೆ. 1.10 ಲಕ್ಷ ಶಿಕ್ಷಕರಲ್ಲಿ 160 ಶಿಕ್ಷಕರಿಗೆ ಕೊರೊನಾ ಸೋಂಕು ಬಂದಿದೆ ಎಂದವರು ಹೇಳಿದ್ದಾರೆ.

## ನಗರಕ್ಕೆ ನಾಳೆ ಸಚಿವ ಭೈರತಿ

ದಾವಣಗೆರೆ, ನ.5- ರಾಜ್ಯ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ನಾಡಿದ್ದು ದಿನಾಂಕ 7 ರ ಶನಿವಾರ ಮಧ್ಯಾಹ್ನ ಬೆಂಗಳೂರಿನಿಂದ ಹೊರಟು, ಸಂಜೆ 6 ಗಂಟೆಗೆ ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ದಿನಾಂಕ 8 ರ ಭಾನುವಾರ ಬೆಳಿಗ್ಗೆ 9-30 ಕ್ಕೆ ಹಾವೇರಿ ಜಿಲ್ಲೆಯ ಶ್ರೀ ಕ್ಷೇತ್ರ ಕಾಗಿನೆಲೆಗೆ ತೆರಳಲಿದ್ದಾರೆ.

## ರಾಣೇಬೆನ್ನೂರಿನಲ್ಲಿಂದು ವಿದ್ಯುತ್ ಇಲ್ಲ

ಕಂಠೀ ಬೀರೇಶ್ವರ ನಗರ, ಗೌಡಶಿವಣ್ಣನವರ ಲೇ-ಔಟ್, ಕಮಲಾ ನಗರ ವಾಟರ್ ಟ್ಯಾಂಕ್, ಸಿದ್ದಾರೂಢ ಮಠ, ಚಿದಂಬರ ನಗರ, ನೇಕಾರ ಕಾಲೋನಿ, ಇಂಜಿನಿಯರಿಂಗ್ ಕಾಲೇಜು, ಕೈಗಾರಿಕಾ ವಸಾಹತ್ತು ಮಾಗೋಡ ರಸ್ತೆ, ದಾನೇಶ್ವರಿ ನಗರ, ಎಸ್.ಆರ್.ಕೆ ಲೇ-ಔಟ್, ಶಿವಲಿಂಗಪ್ಪ ಲೇ-ಔಟ್, ಬೀರೇಶ್ವರ ನಗರ, ಕೆ.ಹೆಚ್.ಬಿ ಕಾಲೋನಿ, ಪಿ ಅಂಡ್ ಟಿ ವಸತಿ ಗೃಹ, ಉಮಾಶಂಕರ ನಗರ, ಮೃತ್ಯುಂಜಯ ನಗರ ಹಾಗೂ ಸುತ್ತ ಮುತ್ತ, ವಿನಾಯಕ ನಗರದ ಕೆಲವು ಭಾಗಗಳ ಗ್ರಾಹಕರಿಗೆ ಏರಿಯಾಗಳಿಗೆ ಮತ್ತು ಎರೆಕುಪ್ಪಿ, ಅಸುಂಡಿ ಮತ್ತು ಹುಲಿಹಳ್ಳಿ ಗ್ರಾಮಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಕೆಲಸಕ್ಕೆ ಸರಳೀಕೃತ ಮಾರ್ಗಸೂಚಿ

**(1ನೇ ಪುಟದಿಂದ)** ತರುವಂತೆ ಉದ್ಯಮ ಒತ್ತಾಯಿಸುತ್ತಾ ಬಂದಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ಟೆಲಿಕಾಂ ಇಲಾಖೆ ವಿಸ್ತೃತವಾದ ಮಾರ್ಗಸೂಚಿಯನ್ನು ಪ್ರಕಟಿಸಿದೆ.

## 'ಕನ್ನಡ ಕೀರ್ತಿ ಕಳಸ' ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ನ.5- ನಗರದ ಸಮಾನ ಮನಸ್ಕರ ಸೇವಾ ಸಮಿತಿಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪ್ರಥಮ ಭಾಷೆ ಕನ್ನಡದಲ್ಲಿ 125 ಕ್ಕೆ 125 ಪರಿಪೂರ್ಣ ಅಂಕ ಪಡೆದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ಮಕ್ಕಳಿಗೆ 'ಕನ್ನಡ ಕೀರ್ತಿ ಕಳಸ' ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಜಿ. ಅಬ್ದುಲ್ ಸತ್ತಾರ್ ಸಾಬ್ ತಿಳಿಸಿದ್ದಾರೆ.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಮತ್ತು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಸಹಯೋಗದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಪ್ರವೇಶ ಪತ್ರ ಪಡೆದು ಭರ್ತಿ ಮಾಡಿಕೊಡುವ ಅವಧಿಯನ್ನು ಇದೇ ದಿನಾಂಕ 10 ರವರೆಗೆ ವಿಸ್ತರಿಸಲಾಗಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ವಿವರಕ್ಕೆ 'ಕನ್ನಡ ಕೃಪಾ' ಕುವೆಂಪು ರಸ್ತೆ, ಕಸ್ತೂರಬಾ ಬಡಾವಣೆ, ದಾವಣಗೆರೆ-577002 ಇಲ್ಲಿಗೆ ಸಂಪರ್ಕಿಸಬಹುದು. ಮೊಬೈಲ್ : 99011 22728, 95131 89196, 63609 96793 ರಲ್ಲಿ ಸಂಪರ್ಕಿಸುವಂತೆ ಖಜಾಂಚಿ ಟಿ. ಅಜ್ಜೇಶಿ ವಿನಂತಿಸಿದ್ದಾರೆ.

## ಹರಿಹರದಲ್ಲಿಂದು ವಿದ್ಯುತ್ ವ್ಯತ್ಯಯ

ಬಾಹರ್ ಮಕಾನ್, ಜಯಶ್ರೀ ಟಾಕೀಸ್, ಮೋರ್, ಎಸ್‌ಬಿಎಂ ಬ್ಯಾಂಕ್, ಮೂರ್ಕಲ್ ಕಾಂಪೌಂಡ್, ವೀರಭದ್ರೇಶ್ವರ ದೇವಸ್ಥಾನ, ಚರ್ಚ್ ರಸ್ತೆ, ಎಸ್‌ಜೆವಿಪಿ ಕಾಲೇಜು ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನದಿ ಪುಷ್ಕರ ಮೇಳ

**(1ನೇ ಪುಟದಿಂದ)** ಸಿದ್ಧಪಡಿಸಲಾಗಿದೆ ಎಂದು ಹೇಳಿದರು. 'ಮಕರ ರಾಶಿಯಲ್ಲಿ ಗುರುಗ್ರಹ (ಬೃಹಸ್ಪತಿ) ಪ್ರವೇಶಿಸಿದಾಗ ತುಂಗಭದ್ರಾ ನದಿ ಪುಷ್ಕರ ಪುಣ್ಯಕಾಲ ಶುರುವಾಗುತ್ತದೆ. ಪ್ರತಿದಿನ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೂ 25 ಸಾವಿರ ಭಕ್ತರು ಭೇಟಿ ನೀಡುವ ನಿರೀಕ್ಷೆ ಇದೆ. ಎಲ್ಲರಿಗೂ ಅನ್ನಪ್ರಸಾದ, ಶುದ್ಧ ಕುಡಿಯುವ ನೀರು ಒದಗಿಸಲಾಗುವುದು ಎಂದು ತಿಳಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಭಕ್ತರು ಭೀತಿಗೊಳಗಾಗುವ ಅಗತ್ಯವಿಲ್ಲ. ಆದರೆ ಎಚ್ಚರಿಕೆಯಿಂದ ಇರಬೇಕು. ಮಠದ ಪ್ರಾಂಗಣದಲ್ಲಿ ಸ್ಯಾನಿಟೈಜೇಷನ್ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

ಕೊರೊನಾ ಮಹಾಮಾರಿ ಇನ್ನೂ ತೊಲಗಿಲ್ಲ. ಹೀಗಾಗಿ ಸದ್ಯಕ್ಕೆ ಶಾಲೆಗಳನ್ನು ಪುನರಾರಂಭಿಸುವ ನಿರ್ಧಾರವನ್ನು ಕರ್ನಾಟಕ ಸರ್ಕಾರದವರು ಮುಂದಕ್ಕೆ ಹಾಕುವುದು ಒಳಿತು ಎಂದು ಶ್ರೀಗಳು ಅಭಿಪ್ರಾಯಿಸಿದರು.

## ಬಿಜೆಪಿಯ ಕುತಂತ್ರ

**(1ನೇ ಪುಟದಿಂದ)** ಮುಗಿಸಲು ಈ ಪ್ರಯತ್ನ ಮಾಡಿ ಯಶಸ್ವಿಯಾಗಿದ್ದಾರೆ.

ಸಿಬಿಐ ಅಧಿಕಾರಿಗಳು ವಿನಯ್ ಕುಲಕರ್ಣಿ ಅವರ ಕಡೆಯವರನ್ನು ಕರೆದುಕೊಂಡು ಹೋಗಿ ವಿಚಾರಣೆ ನಡೆಸಿದ್ದಾರೆ. ನಾನು ಆ ಭಾಗಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ತಮಗಾದ ತೊಂದರೆ ಹೇಳಿಕೊಂಡಿದ್ದಾರೆ.

ಸಿಬಿಐ ಅಧಿಕಾರಿಗಳು ತಮ್ಮ ಮೇಲೆ ಎಷ್ಟೇ ಒತ್ತಡ ಬಿದ್ದರೂ ಕಾನೂನಿನ ವ್ಯಾಪ್ತಿಯಲ್ಲೇ ಕೆಲಸ ಮಾಡಬೇಕಿದೆ. ವಿಚಾರಣೆ ಮಾಡಿ. ಒಂದು ಸಾರಿ ಸಾಲದಿದ್ದರೆ ಹತ್ತು ಬಾರಿ ಕರೆದು ವಿಚಾರಣೆ ಮಾಡಲಿ. ಆದರೆ ರಾಜಕೀಯ ಒತ್ತಡಕ್ಕೆ ತಲೆ ಬಾಗಬೇಡಿ ಎಂದವರು ಆಗ್ರಹಿಸಿದ್ದಾರೆ.

## ಜಿಎಂಐಟಿಗೆ ಉತ್ತಮ ಫಲಿತಾಂಶ



ದಾವಣಗೆರೆ, ನ. 5- ಬೆಂಗಳೂರು ತಾಂತ್ರಿಕ ಶಿಕ್ಷಣ ಮಂಡಳಿಯು ಸೆಪ್ಟೆಂಬರ್ 2020ರ ಅಂತಿಮ ವರ್ಷದ ಡಿಪ್ಲೋಮಾ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದ್ದು, ನಗರದ ಜಿ ಎಂ ಐ ಟಿ ಪಾಲಿಟೆಕ್ನಿಕ್‌ಗೆ ವಿದ್ಯಾರ್ಥಿಗಳು 85.71% ಉತ್ತಮ ಫಲಿತಾಂಶ ನೀಡಿದ್ದಾರೆ.

ಕಾಲೇಜಿನ ಸಿವಿಲ್ ವಿಭಾಗದ ವಿದ್ಯಾರ್ಥಿಗಳಾದ ಮೊಹಮ್ಮದ್ ಎಂ.ಬಿ. ತೌಫಿಕ್ (94.82%), ಎನ್.ಸಿ. ಗಿರೀಶ್ (86.08%) ಮತ್ತು ಮೊಹಮ್ಮದ್ ಅನ್ವರ್ ರಜಾ (80.16%) ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ.

ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಜಿ.ಎನ್. ಚಂದ್ರಕಾಂತ್ (84.64%), ಎಂ.ಎಸ್. ಅಕ್ಷಯ್ ಕುಮಾರ್ (84.16%) ಮತ್ತು ಪುರುಷೋತ್ತಮ್ ಸಾಯಿ (74.08%) ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ.


**ಸುಭದ್ರ ಆರ್ಥಿಕ ಅಭಿವೃದ್ಧಿಗಾಗಿ**

ಆತ್ಮೀಯರೆ, ಸಾಲದ EMI ನಿಂದ ಮುಕ್ತರಾಗಿ ಉಳಿತಾಯದ ಹೆಜ್ಜೆಗೆ ಸಾಗಲು ಸುರಕ್ಷಿತ ಹೂಡಿಕೆಯ ಮುಖಾಂತರ ಮಕ್ಕಳ ವಿದ್ಯಾಭ್ಯಾಸ, ಮದುವೆ, ಹಾಗೂ ನಿವೃತ್ತಿ ಜೀವನದ ನೆಮ್ಮದಿಯ ಆರ್ಥಿಕ ಜೀವನಕ್ಕಾಗಿ ಹಣವನ್ನೇ ದುಡಿಸುವ ಮುಖಾಂತರ ಆರ್ಥಿಕವಾಗಿ ಸದೃಢರಾಗಲು ಸಂಪರ್ಕಿಸಿ:

ANVITH ENTERPRISES-MPK- Financial Advisor
P.J. Extenstion, Davanagere-577002
(M) - 99809 16126

**ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾ ಅಸೋಸಿಯೇಷನ್,**
ಪೂನಾ - ಬೆಂಗಳೂರು ರಸ್ತೆ, ದಾವಣಗೆರೆ-577002.
**ಮಳಿಗೆಗಳು ಬಾಡಿಗೆಗೆ**

ಹದಡಿ ರಸ್ತೆಯ ನಮ್ಮ ಧರ್ಮಶಾಲೆಯ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಳಿಗೆಗಳಲ್ಲಿ 3 (ಮೂರು) ಮಳಿಗೆಗಳು ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಧರ್ಮಶಾಲೆಯ "ಹನುಮಂತಪ್ಪನವರ ಕಟ್ಟಡ" ದಲ್ಲಿರುವ ಆಡಳಿತ ಕಛೇರಿಯನ್ನು ಸಂಪರ್ಕಿಸಿ.

ದೂರವಾಣಿ ಸಂಖ್ಯೆ : (08192) 258834/258836

**GODOWNS & OFFICE SPACE AVAILABLE ON RENT**
AT
**RAVI MILLS PREMISES**
POONA-BANGALORE ROAD
CONTACT :
**M/s R. Hanumanthappa & Son,**
# 56/1,2, Hanumanthappa Building,
Poona-Bangalore Road, DAVANGERE-577002.
Phone Nos : (08192) - 258834 / 258836

## ದೆಹಲಿ ಸಂಪುಟದಿಂದ ಲಕ್ಷ್ಮಿಪೂಜೆ




ನವದೆಹಲಿ, ನ. 5 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ಇಡೀ ಸಂಪುಟದ ಜೊತೆ ದೀಪಾವಳಿಯಲ್ಲಿ ಲಕ್ಷ್ಮಿ ಪೂಜೆ ಕೈಗೊಳ್ಳಲಿದ್ದಾರೆ.

ವೆಬ್‌ಕಾಸ್ಟ್ ಮೂಲಕ ಮಾತನಾಡುತ್ತಿದ್ದ ಕೇಜ್ರಿವಾಲ್ ಈ ವಿಷಯ ತಿಳಿಸಿದ್ದು, ಪೂಜೆಯನ್ನು ಟಿ.ವಿ. ವಾಹಿನಿಗಳ ಮೂಲಕ ಪ್ರಸಾರ ಮಾಡಲಾಗುವುದು. ಜನರೂ ದೂರದಿಂದಲೇ ಸಮಾರಂಭದಲ್ಲಿ ಪಾಲ್ಗೊಳ್ಳಬಹುದು ಎಂದು ಹೇಳಿದ್ದಾರೆ.

ನಾವು ಜೊತೆಯಾಗಿ ದೀಪಾವಳಿ ಆಚರಿಸಲಿದ್ದೇವೆ. ಆದರೆ, ಯಾವುದೇ ಕಾರಣಕ್ಕೂ ಪಟಾಕಿ ಹಾರಿಸುವುದಿಲ್ಲ. ಇದರಿಂದ ನಮ್ಮ ಮಕ್ಕಳ ಹಾಗೂ ಕುಟುಂಬದ ಸದಸ್ಯರ ಜೀವನದ ಜೊತೆ ಚೆಲ್ಲಾಟ ಆಡಿದಂತೆ ಎಂದವರು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 54 ಪಾಸಿಟಿವ್



ದಾವಣಗೆರೆ, ನ.5- ಜಿಲ್ಲೆಯಲ್ಲಿ ಗುರುವಾರ 54 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡ ಬಗ್ಗೆ ವರದಿಯಾಗಿದೆ. 45 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 21, ಹರಿಹರ 12, ಜಗಳೂರು 4, ಚನ್ನಗಿರಿ 6, ಹೊನ್ನಾಳಿ 10 ಹಾಗೂ ಹೊರ ಜಿಲ್ಲೆಯ ಓರ್ವ ವ್ಯಕ್ತಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

# ಹರಪನಹಳ್ಳಿ ಕಾಂಗ್ರೆಸ್ ಭದ್ರಕೋಟೆ : ಶಾಸಕ ಪರಮೇಶ್ವರನಾಯ್ಕ

ಹರಪನಹಳ್ಳಿ, ನ.5- ಹರಪನಹಳ್ಳಿ ಸದಾ ಕಾಂಗ್ರೆಸ್‌ನ ಭದ್ರ ಕೋಟೆ. ಪಕ್ಷದಲ್ಲಿನ ಆಂತರಿಕ ಭಿನ್ನಾಭಿಪ್ರಾಯ, ಗುಂಪುಗಾರಿಕೆಯಿಂದ ನಾವಿಲ್ಲಿ ಸೋಲು ಕಂಡಿದ್ದೇವೆಯೇ ಹೊರತು ಮತದಾರರಿಂದಲ್ಲ ಎಂದು ಶಾಸಕ ಪಿ.ಟಿ. ಪರಮೇಶ್ವರನಾಯ್ಕ ಹೇಳಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ನೂತನವಾಗಿ ಆಯ್ಕೆಯಾಗಿರುವ ಟಿಎಪಿಸಿಎಂಸಿ ನಿರ್ದೇಶಕರಾಗಿ 'ಬಿ' ತರಗತಿಯಿಂದ ಆಯ್ಕೆಯಾಗಿರುವ ಗಿಡ್ಡಳ್ಳಿ ನಾಗರಾಜ್, ಎಲ್.ತಿಮ್ಮನಾಯ್ಕ, ಕುಲುಮಿ ಅಬ್ದುಲ್, ಪಿ. ಪ್ರೇಮ್‌ಕುಮಾರ್, ತಳವಾರ ಮಂಜಪ್ಪ, ಎಲ್.ಬಿ. ಹಾಲೇಶ್ ನಾಯ್ಕ, ಡಿ.ಜಿ.ಪ್ರಕಾಶ್ ಗೌಡ, ರೇವಣಸಿದ್ದಪ್ಪ, ನೇತ್ರಾವತಿ ಪರಶುರಾಮ್ ಅವರಿಗೆ ಸನ್ಮಾನಿಸಿ, ಗೌರವಿಸಿದ ಬಳಿಕ ಅವರು ಮಾತನಾಡಿ, 'ಎ' ತರಗತಿ ಸದಸ್ಯ ಪ್ರತಿನಿಧಿಗಳಿಂದ ಎಂ.ವಿ. ಕೃಷ್ಣಕಾಂತ, ತಳವಾರ ಮಂಜಪ್ಪ, ಬಿ.ಕೆ ಪ್ರಕಾಶ., ರೇವಣ್ಣಸಿದ್ದಪ್ಪ, ಕೆ.ಪಿ. ವಿರೂಪಾಕ್ಷಪ್ಪ, ಯು. ಹನುಮಂತಪ್ಪ ಹಾಗೂ ಹಾಲೇಶ್‌ನಾಯ್ಕ್ ಆಯ್ಕೆಯಾಗಿದ್ದಾರೆ. ಈ ಅಭ್ಯರ್ಥಿಗಳ ಗೆಲುವಿಗೆ ರೈತರು ಮತ್ತು ಷೇರುದಾರರು ಸಾಕ್ಷಿಯಾಗಿದ್ದಾರೆ ಎಂದರು.

ಟಿಎಪಿಸಿಎಂಸಿ ಚುನಾವಣೆಯ ಫಲಿತಾಂಶ ಮುಂದಿನ ಚುನಾವಣೆಗಳ ಫಲಿತಾಂಶಕ್ಕೆ ದಿಕ್ಸೂಚಿಯಾಗಿದೆ. ಈ ಚುನಾವಣೆಯಲ್ಲಿ ಪಕ್ಷದ 14 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಹಿಂದೆ ನಮ್ಮ ಅಧಿಕಾರದ ಅವಧಿಯನ್ನು ಸೊಸೈಟಿಯಲ್ಲಿ ಸದೃಢಗೊಳಿಸುವ ನಿಟ್ಟಿನಲ್ಲಿ ವಿವಿಧ ಜನಪರ ಕಾರ್ಯಕ್ರಮಗಳನ್ನು ನೀಡಿದ್ದೆವು ಆಗ ಪಡಿತರ, ಬಟ್ಟೆಗಳನ್ನು ವಿತರಿಸಿದ್ದೆವು ಎಂದು ನೂತನ ನಿರ್ದೇಶಕರುಗಳಿಗೆ ಸಲಹೆ ನೀಡಿದರು.



ಪುರಸಭಾ ಚುನಾವಣಾ ಉಸ್ತುವಾರಿ ಸಿರಾಜ್‌ಶೇಖ್ ಮಾತನಾಡಿ, ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಗಾದಿಗೆ 7 ರಂದು ದಿನಾಂಕ ನಿಗದಿಯಾಗಿರುವ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧ್ಯಕ್ಷರ ಸೂಚನೆಯ ಮೇರೆಗೆ ಪಕ್ಷದಿಂದ ಬಿ ಫಾರಂ ಪಡೆದು ಜಯ ಗಳಿಸಿದ 14 ಜನ ಸದಸ್ಯರ ಸಭೆ ಕರೆದಿದ್ದು, ಅವರ ಹಾಜರಾತಿಯನ್ನು ನೋಡಿಕೊಂಡು ವಿಪ್ ಜಾರಿ ಮಾಡಿ ಅನ್ಯ ಮಾರ್ಗ ಅನುಸರಿಸುವವರ ವಿರುದ್ಧ ಪಕ್ಷ ಶಿಸ್ತು ಕ್ರಮ ಕೈಗೊಳ್ಳಲಿದೆ ಎಂದರು.

ಬಳ್ಳಾರಿ ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬನ್ನಿಕಲ್ ಶಿವಯೋಗಿ, ಬಳ್ಳಾರಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯ ಶಶಿಧರ್ ಪೂಜಾರ್, ಹರಪನಹಳ್ಳಿ ಬ್ಲಾಕ್ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷ ಹೆಚ್.ಕೆ.ಹಾಲೇಶ್, ಜಿಲ್ಲಾ ಪಂಚಾಯ್ತಿ ಸದಸ್ಯ ಎಚ್.ಬಿ.ಪರಶುರಾಮಪ್ಪ, ಪುರಸಭೆ ಮಾಜಿ ಅಧ್ಯಕ್ಷ ಎಂ.ರಾಜಶೇಖರ್, ಚಿಗಟೇರಿ ಬ್ಲಾಕ್ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷ ಮುತ್ತಿಗಿ ಸಾಬಳ್ಳಿ ಜಂಬಣ್ಣ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಎಂ.ಟಿ. ಬಸವನಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಎಲ್. ಪ್ರೇಮ್ಯಾನಾಯ್ಕ, ವಕೀಲ ಮತ್ತಿಹಳ್ಳಿ ಅಜ್ಜಣ್ಣ, ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಸಂಚಾಲಕ ಬಿ.ನಜೀರ್ ಅಹ್ಮದ್, ಲಕ್ಷ್ಮೀಪುರ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಪಿ.ಟಿ.ಭರತ್, ಪುರಸಭೆ ಸದಸ್ಯರಾದ ಜಾಕೀರ್ ಹುಸೇನ್, ಪುರಸಭೆ ಮಾಜಿ ಸದಸ್ಯ ಅರುಣ್ ಪೂಜಾರ್, ತೊಗರಿಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಿ. ನೇಮ್ಯಾನಾಯ್ಕ, ಮುಖಂಡರಾದ ಆಲದಳ್ಳಿ ಷಣ್ಮುಖಪ್ಪ, ಯರಬಳ್ಳಿ ಉಮಾಪತಿ, ಪಿ.ವೇದನಾಯ್ಕ, ಚಿರಸ್ತಹಳ್ಳಿ ಪಿ. ಮರಿಯಪ್ಪ, ಹುಲಿಕಟ್ಟಿ ಬಾಷ, ತೌಡೂರು ಕೆಂಚಪ್ಪ, ಅಲಮರಸೀಕೇರಿ ಪರಶುರಾಮ, ಪಿ.ಪರಶುರಾಮ, ಬಾಣದ ಗಂಗಪ್ಪ, ಎಂ.ಕೆ.ರಾಯಲ್ ಸಿದ್ದಿಕ್, ರಿಯಾಜ್, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಲಾರಿ ಮಾಲೀಕರು-ಎಪಿಎಂಸಿ ವರ್ತಕರ ರಾಜೀ ಸಂಧಾನ ಸಫಲ

ದಾವಣಗೆರೆ, ನ.5- ಕೃಷಿ ಉತ್ಪನ್ನಗಳ ಸಾಗಾಟದ ವಿಚಾರದಲ್ಲಿ ಲಾರಿ ಮಾಲೀಕರು ಹಾಗೂ ಎಪಿಎಂಸಿ ವರ್ತಕರ ನಡುವೆ ರಾಜೀ ಸಂಧಾನ ಸಫಲವಾಗಿದ್ದು, ಈ ಇಬ್ಬರ ಸಂಘರ್ಷ ತೆರೆ ಕಂಡಿದೆ.

ದಾವಣಗೆರೆಯಿಂದ ಬೆಂಗಳೂರಿಗೆ ಕ್ವಿಂಟಾಲ್‌ಗೆ 115 ರೂ. ಬಾಡಿಗೆಯನ್ನು ಲಾರಿ ಮಾಲೀಕರು ನಿಗದಿ ಮಾಡಿದ್ದರು. ಆದರೆ ಮೆಕ್ಕೆಜೋಳ ಸಾಗಿಸಲು ಕಡಿಮೆ ಬಾಡಿಗೆಗೆ ಅನ್ಯ ಜಿಲ್ಲೆಗಳಿಂದ ವರ್ತಕರು ಲಾರಿ ಕರೆಸಿದ್ದರು ಹಾಗೂ ಇದನ್ನು ಆಕ್ಷೇಪಿಸಿ, ಓವರ್ ಲೋಡ್ ಕಾರಣಕ್ಕೆ ಅನ್ಯ ಜಿಲ್ಲೆ ಲಾರಿಗಳಿಗೆ ಜಿಲ್ಲಾ ಲಾರಿ ಮಾಲೀಕರು ಆರ್ ಟಿಓ ಅಧಿಕಾರಿಗಳನ್ನು ಕರೆಸಿ ದಂಡ ವಿಧಿಸಿದ್ದು, ಈ ವಿಚಾರ ಇಬ್ಬರ ನಡುವಿನ ಗುದ್ದಾಟಕ್ಕೆ ಕಾರಣವಾಗಿತ್ತು. ಮೊನ್ನೆ ಎಪಿಎಂಸಿ ಪ್ರಾಂಗಣದಲ್ಲಿ ವರ್ತಕರು, ಲಾರಿ ಮಾಲೀಕರ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು.



ಮೆಕ್ಕೆಜೋಳ ವರ್ತಕರ ಸಂಘದ ಕಾರ್ಯದರ್ಶಿ ಕೆ. ಜಾವೀದ್ ಸಾಬ್ ಅವರು ಲಾರಿ ಮಾಲೀಕರು ಕಳ್ಳರು ಎಂಬುದಾಗಿ ಹೇಳಿದ್ದು ಲಾರಿ ಮಾಲೀಕರ ಅಸಮಾಧಾನಕ್ಕೆ ಕಾರಣವಾಗಿ ತಮ್ಮ ಲಾರಿಗಳನ್ನು ರಸ್ತೆಗಿಳಿಸದೇ ಸರಕು ಸಾಗಾಟ ಸ್ಥಗಿತಗೊಳಿಸಿದ್ದರು.

ನಗರದ ಹೊಸ ಬಸ್ ನಿಲ್ದಾಣದ ಎದುರಿನ ಮೆಕ್ಕೆಜೋಳ ವರ್ತಕರ ಸಂಘದ ಕಚೇರಿಯಲ್ಲಿ ಇಂದು ನಡೆದ ಸಂಧಾನ ಸಭೆಯಲ್ಲಿ ಲಾರಿ ಮಾಲೀಕರು ಹಾಗೂ ವರ್ತಕರ ಮಧ್ಯೆ ಇದ್ದ ಸಂಘರ್ಷ ರಾಜೀ ಸಂಧಾದ ಮುಖೇನ ಸುಖಾಂತ್ಯ ಕಂಡಿತು.

ಸಭೆಯಲ್ಲಿ ಮಾತನಾಡಿದ ಮೆಕ್ಕೆಜೋಳ ವರ್ತಕರ ಸಂಘದ ಕಾರ್ಯದರ್ಶಿ ಕೆ. ಜಾವೀದ್ ಸಾಬ್, ಲಾರಿ ಮಾಲೀಕರ ಬಗ್ಗೆ ನಾನು ಅರಿವಿಲ್ಲದೇ ಆವೇಷದಲ್ಲಿ ಮಾತುಗಳನ್ನಾಡಿದ್ದು ತಪ್ಪಾಗಿದೆ ಎಂದು ಕ್ಷಮೆ ಕೋರಿದ್ದಾರೆ. ಅಲ್ಲದೇ ಎಲ್ಲರೂ ಹೊಂದಿಕೊಂಡು ಹೋಗೋಣ ಎಂದಿದ್ದಾರೆ.

ಇದಕ್ಕೆ ಜಿಲ್ಲಾ ಲಾರಿ ಮಾಲೀಕರ ಹಾಗೂ ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಒಪ್ಪಿಗೆ ಸೂಚಿಸಿದರು. ಕೆಲ ಬೇಡಿಕೆ ಸಂಬಂಧ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು. ವಿವಾದ ಮುಂದುವರೆಸದಂತೆ ಎಲ್ಲರೂ ತೀರ್ಮಾನ ಕೈಗೊಂಡರು.

ಲಾರಿ ಮಾಲೀಕರು ಕಳ್ಳರು ಎಂಬುದಾಗಿ ಹಿರಿಯ ವರ್ತಕ ಜಾವಿದ್ ಅವರು ಹೇಳಿದ್ದ ಮಾತುಗಳು ನೋವುಂಟು ಮಾಡಿತ್ತು. ಹಾಗಾಗಿ ಲಾರಿಗಳ ಸರಕು ಸಾಗಾಟ ಸ್ಥಗಿತಗೊಳಿಸಿದ್ದೆವು. ಇದೀಗ ಅವರು ತಮ್ಮ ಮಾತನ್ನು ಹಿಂಪಡೆದು ಕ್ಷಮೆ ಕೇಳಿದ ಕಾರಣ ಮನ್ನಿಸಲಾಗಿದೆ. ಬಾಡಿಗೆಯನುಸಾರ ಲಾರಿಗಳ ಸರಕು ಸಾಗಾಟ ಯಥಾ ಪ್ರಕಾರ ಮುಂದುವರೆಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಂಧಾನ ಯಶಸ್ವಿಯಾಗಿದೆ. ಎಪಿಎಂಸಿಯಲ್ಲಿ ವಹಿವಾಟು ಸುಗಮವಾಗಿ ನಡೆಯುತ್ತಿದೆ ಎಂದು ವರ್ತಕ ಪ್ರತಿನಿಧಿ ದೊಗ್ಗಳ್ಳಿ ಬಸವರಾಜ್ ತಿಳಿಸಿದ್ದಾರೆ.

ಸಭೆಯಲ್ಲಿ ಲಾರಿ ಮಾಲೀಕರ ಸಂಘದ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ, ದಾವಣಗೆರೆ ಲೋಕಲ್ ಮತ್ತು ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಎಂ. ದಾದಾಪೀರ್, ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಕಾರ್ಯದರ್ಶಿ ಇಮಾಮ್ ಹುಸೇನ್, ಜಿಲ್ಲಾ ಗೌರವಾಧ್ಯಕ್ಷ ನೇತಾಜಿರಾವ್, ಮಹಾಂತೇಶ್ ಒಣರೊಟ್ಟಿ, ಫೈರೋಜ್, ಬೆಳ್ಳೂಡಿ ಶಿವಕುಮಾರ್, ಭೀಮಣ್ಣ, ಸೋಗಿ ಮುರುಗೇಶ್, ಅಹ್ಮದ್ ಶರೀಫ್, ಮನ್ಸೂರ್ ಸೇರಿದಂತೆ ಲಾರಿ ಮಾಲೀಕರು ಹಾಗೂ ವರ್ತಕರು ಇದ್ದರು.

# ರೈತರ ಕುಟುಂಬಕ್ಕೆ ಪರಿಹಾರ ನೀಡಿ

## ರೈತರ ಆತ್ಮಹತ್ಯೆ : ರಾಣೇಬೆನ್ನೂರಿನಲ್ಲಿ ರೈತರಿಂದ ಪ್ರತಿಭಟನೆ



ರಾಣೇಬೆನ್ನೂರು, ನ.5- ಸಾಲ-ಬಾಧೆಯಿಂದ ತಾಲ್ಲೂಕಿನ ನಿಟ್ಟೂರು ಗ್ರಾಮದ ರೈತರಿಬ್ಬರು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಅವರ ಕುಟುಂಬಗಳಿಗೆ ಶೀಘ್ರ ಪರಿಹಾರ ನೀಡುವಂತೆ ಆಗ್ರಹಿಸಿ, ಕರ್ನಾಟಕ ರೈತ ಸಂಘದ ಕಾರ್ಯಕರ್ತರು ನಗರದ ಸರಕಾರಿ ಆಸ್ಪತ್ರೆ ಶವಾಗಾರದ ಎದುರು ಪ್ರತಿಭಟಿಸಿ ಉಪ ತಹಶೀಲ್ದಾರ್ ಎಂ.ಎನ್. ಹಾದಿಮನಿ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ರೈತ ಮುಖಂಡ ಹನುಮಂತಪ್ಪ ಕಬ್ಬಾರ ಮಾತನಾಡಿ, ಮಂಜಪ್ಪ ಕರಿಯಪ್ಪನವರ ಮತ್ತು ಮಹೇಶ ಪರಸಳ್ಳಿ ಆತ್ಮಹತ್ಯೆಗೆ ಶರಣಾಗಿದ್ದರಿಂದ, ಅವರ ಕುಟುಂಬ ಸದಸ್ಯರು ಸಂಕಷ್ಟ ಪರಿಸ್ಥಿತಿ ಎದುರಿಸುವಂತಾಗಿದೆ. ಕೃಷಿಗಾಗಿ ಸಾಕಷ್ಟು ಸಾಲ ಮಾಡಿದ್ದ ರೈತರಿಗೆ ಇತ್ತೀಚಿಗೆ ಸುರಿದ ಮಳೆಯಿಂದಾಗಿ ಕೈಗೆ ಬಂದಿದ್ದ ಫಸಲು ನಾಶವಾಗಿದೆ. ಬೇರೆ ದಾರಿ ಕಾಣದೆ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕೊರೊನಾ ನೆಪದಿಂದ ರಾಜ್ಯ ಸರಕಾರ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಮಾಡಿದ ಸಾಲ ಮನ್ನಾದ 2 ಲಕ್ಷ ಹಣವನ್ನು ಹಿಂದಕ್ಕೆ ಪಡೆದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಕಳೆದ 2-3 ವರ್ಷಗಳ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಇದುವರೆಗೂ ಪರಿಹಾರ ದೊರಕಿರುವುದಿಲ್ಲ ಎಂದು ಹೇಳಿದರು.

ರವೀಂದ್ರಗೌಡ ಪಾಟೀಲ, ದಿಳ್ಳೆಪ್ಪ ಸತ್ಯಪ್ಪನವರ, ಸಿದ್ದಪ್ಪ ಕುಪ್ಪೇಲೂರ, ಸುರೇಶ, ಶಿವಪ್ಪ ನಂದಿಹಳ್ಳಿ, ಚಂದ್ರಣ್ಣ ಬೇಡರ, ರಾಮಪ್ಪ ಕಿರಗೇರಿ, ರೇವಣೆಪ್ಪ, ರಮೇಶ ಮಲ್ಲಾಡದ ಮತ್ತಿತರರು ಪ್ರತಿಭಟನೆಯಲ್ಲಿದ್ದರು.

# ಕಾರಿನ ಗಾಜು ಒಡೆದು ಲಕ್ಷ ನಗದು, ಚಿನ್ನಾಭರಣ ಕಳ್ಳತನ

ದಾವಣಗೆರೆ, ನ.5- ಚಿನ್ನಾಭರಣ ವರ್ತಕರೋರ್ವರ ಕಾರಿನ ಗಾಜು ಒಡೆದು 2.50 ಲಕ್ಷ ನಗದು ಹಾಗೂ 150 ಗ್ರಾಂ ಚಿನ್ನಾಭರಣವನ್ನು ದೋಚಿ ಪರಾರಿಯಾಗಿರುವ ಘಟನೆ ನಗರದಲ್ಲಿ ನಿನ್ನೆ ರಾತ್ರಿ ನಡೆದಿದೆ.

ಬ್ಯಾಡಗಿ ಪಟ್ಟಣದ ಮಲ್ಲಿಕಾರ್ಜುನ್ ಚಿನ್ನ, ಹಣ ಕಳೆದುಕೊಂಡವರು. ಚಿನ್ನಾಭರಣ ವರ್ತಕರಾದ ಮಲ್ಲಿಕಾರ್ಜುನ್ ನಗರದ ಚೌಕಿಪೇಟೆಯ ಮಳಿಗೆಯೊಂದರಲ್ಲಿ ಚಿನ್ನಾಭರಣವನ್ನು ಖರೀದಿಸಿ ವಾಪಸ್ ತೆರಳುವಾಗ ಗುಂಡಿ ಮಹಾದೇವಪ್ಪನವರ ವೃತ್ತದ ಬಳಿ ಕಾರು ನಿಲ್ಲಿಸಿ ತಿಂಡಿ ತಿನ್ನಲು ಹೋಗಿದ್ದಾರೆ. ಬರುವಷ್ಟರಲ್ಲಿ ಕಾರಿನ ಹಿಂಬದಿಯ ಗಾಜು ಒಡೆದು ನಗದು ಹಾಗೂ ಚಿನ್ನವನ್ನು ಕಳ್ಳರು ದೋಚಿದ್ದಾರೆ.

ಸ್ಥಳಕ್ಕೆ ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ನಗರದ ತೊಗಟವೀರ ಕಲ್ಯಾಣ ಮಂಟಪದ ಬಳಿ ಇದೇ ಮಾದರಿಯಲ್ಲಿ ಕಾರಿನ ಗಾಜನ್ನು ಒಡೆದು 6 ಲಕ್ಷ ರೂ. ದೋಚಿದ್ದನ್ನು ಇಲ್ಲಿ ಸ್ಮರಿಸಬಹುದು.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte